ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಆಗಸ್ಟ್ 10, 2003
ವಿಶೇಷ ಸಂಚಿಕೆ ಬೆಲೆ ರೂ. 2.00

ಕೆ.ಆರ್.ಪುರಂ ನಗರಸಭಾ ಚುನಾವಣಾ ಹಿನ್ನೆಲೆಯಲ್ಲಿ....

ಗಸ್ತುವಾರಿ ಸಚಿವರೊಂದಿಗೆ ಅಣಕ ಸಂದರ್ಶನ

ಪ್ರಶ್ನೆ : ಈ ಬಾರಿ ಚುನಾವಣೆ ನಿಮಗೆ ಶಾದಾಯಕವಾಗಿದೆಯೇ?

ಸಚಿವರು : ಏಕಿಲ್ಲ, ನೋಡಿ ರಸ್ತೆ ಮೇಲ್ ಕಟ್ಟೋ ಪ್ಲಾಸ್ಟಿಕ್ ಚೀಲಕ್ಕೆ ಎಷ್ಟು ಬಂಡವಾಳ ಸುರಿದಿದ್ದೀವಿ. ಹಾಗೆ ಮನೆ ಮನೆಗೊಂದು ಬ್ಯಾನರ್ ಕಟ್ಟಿದ್ದೀವಿ, ರಸ್ತೆಗೊಂದು ಆಟೋ ತಿರುಗಾಡಿಸ್ತಾ ಇದ್ದೀವಿ. ಗುಂಡು-ತುಂಡು ಕೊಟ್ಟು ಕಾರ್ಯಕರ್ತರನ್ನು ಬಿಟ್ಟಿದ್ದೀವಿ. ಮೇಲಾಗಿ ನಾನು ಬೀದಿ - ಬೀದಿಲಿ ಮೆರವಣಿಗೆ ಹೋಗಿ ಕೈ ಮುಗ್ದಿದ್ದೀನಿ. ಅಲ್ಲಾ ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕಿದ್ದೀವಿ. ಗೆಲ್ಲೇಬೇಕು ಅಂತ ತಾನೆ ಇಷ್ಟು ಮಾಡ್ತಿದ್ದೀವಿ.

ಪ್ರಶ್ನೆ : ಅದ್ಸರಿ, ಕಳೆದ ಬಾರಿ ಅಧಿಕಾರದಲ್ಲಿ ಇದ್ದೋರು ನೀವು. ನಿಮ್ಮ ಸಾಧನೆಗಳ ಕುರಿತು ಹೇಳ್ತೀರಾ.

ಸಚಿವರು : ಅಯ್ಯೋ, ಒಂದಲ್ಲ ಎರಡಲ್ಲ ಬೇಕಾದಷ್ಟು. ಮುಖ್ಯವಾದ್ದು ಅಂದ್ರ ಅದೇ ನೂರುಕೋಟಿ ವ್ಯವಹಾರದ್ದು. ಅಲ್ಲ ಕೆ.ಆರ್. ಪುರ ಯಾರಿಗ್ರೀ ಗೊತ್ತಿತ್ತು. ಕೆ.ಆರ್.ಪುರ ಅಂದ್ರೆ ಏನು? ನಗರ ಸಭೆ ಅಂದ್ರೆ ಏನು? ಅಂತ ಜಗತ್ತಿಗೇ ಪರಿಚಯ ಮಾಡಿದ್ದೀವಿ.

ಪ್ರಶ್ನೆ : ನಾಗರೀಕ ಸೌಲಭ್ಯಗಳು ಏನೇನ್ ಸಿಕ್ಕಿದಾವೆ ಸಾರ್ ಜನಕ್ಕೆ?

ಸಚಿವರು : ಆ ರೀತಿ ಕೇಳಿ, 3.7 ಕೋಟಿ ಕೊಟ್ಟು ನೀರು ಸರಬರಾಜಿಗೆ ಪೈಪು ಖರೀದಿ ಮಾಡಿದ್ವಿ. ಪಾರ್ಥೇನಿಯಂ ಕಳೆ ಕೀಳಕ್ಕೆ 63 ಲಕ್ಷ ಖರ್ಚಾಯ್ತು. ಕೊಳವೆ ಬಾವಿಗೆ 2.7 ಕೋಟಿ ರೂಪಾಯಿ ಇಳಿಬಿಟ್ವಿ, ಅದೇ ರೀಪೇರಿಗೇ. 18.75 ಕೋಟಿ ರೂಪಾಯಿಗೆ ರಸ್ತೆ ಮೇಲೆ ಟಾರ್ ಬಿಟ್ಟಿದ್ದೀವಿ... 10.57 ಕೋಟಿಗೆ ಬಡವರಿಗೆ ಅಂತ ವಿದ್ಯುತ್ ಉಪಕರಣ ಖರೀದಿ ಮಾಡಿದ್ವಿ. 6.6 ಕೋಟಿ ಕೊಟ್ಟು ಆಕಾಶಕ್ಕೇ ಹೈ ಮಾಸ್ಕ್ ಲೈಟ್ ಬಿಟ್ವಿ. ಆ ಕಂಬಕ್ಕೊಂದು ಒಂದೂವರೆ ಕೋಟಿ ಕೊಟ್ಟಿದ್ದೀವಿ. ಟೆಂಡರ್ ಕರೆಯುಕ್ಕೆ ಪುರುಸೊತ್ತಿರಲಿಲ್ಲ, ಹಾಗಾಗಿ ನಾವೇ ಸೇರಿ ಒಂದ್ಹೆವತ್ತು ಕೋಟಿಗೆ ಇನ್ನೂ ಏನೇನೋ ಸಾಮಾನು ಸರಂಜಾಮು ಖರೀದಿ ಮಾಡಿದ್ವಿ. ಇನ್ನೂ ಏನೇನೋ ಬಿಡಿ.

ಪ್ರಶ್ನೆ : ಸರಿ ಸಾರ್ ಬಡವರಿಗೆ ಅಂತಾ ಏನ್ ಮಾಡಿದ್ರಿ?

ಸಚಿವರು : ಬಡವ್ರೆ ಕಣ್ರೀ ನಮಗಾದಾರ. ಬಡವರ ಮನೆಗೆ ಸಿಮೆಂಟ್ ಶೀಟ್ ಹೊದ್ಸಕ್ಕೆ ಅಂತ ಹದಿಮೂರುವರೆ ಕೋಟಿ ರೂಪಾಯಿ ಖರ್ಚು ಮಾಡಿವಿ. ಬಡವರ ಹೆಣ್‌ಮಕ್ಕಳಿಗೆ ಹೊಲಿಗೆ ಯಂತ್ರಕ್ಕೆ ಅಂತ 63 ಲಕ್ಷ ಖರ್ಚಾಯ್ತು. ಪಾಪಾ.. ತಳ್ಳಗಾಡಿಯವರಿಗೆ ಒಂದೆಪ್ಪತ್ತೇಳು ಲಕ್ಷ ಕೊಟ್ಟಿದ್ದೀವಿ.

ಪ್ರಶ್ನೆ : ಸರಿ ಬಿಡಿ ಸಾರ್; ಮತ್ತೆ ಈ ಲೋಕೋಪಕಾರದ ಕೆಲಸ ಏನಾಗಿದೆ ಸಾರ್ ನಿಮ್ ಅಧಿಕಾರದ ಅವ್ದೀಲಿ?

ಸಚಿವರು : ಅಯ್ಯೋ- ರಸ್ತೆ ಬೀದಿಗಳಿಗೆ, ಹೆಸರು ಬರೆಸೋ ಕಂಬಗಳಿಗೇ ಒಂದೂವರೆ ಕೋಟಿ ಖರ್ಚು ಮಾಡಿದ್ದೀವಿ ಅಂದ್ರೆ ಉಳಿದಿದ್ದನ್ನ ನೀವೇ ಇಮ್ಯಾಜಿನ್ ಮಾಡ್ಕಳಿ.

ಪ್ರಶ್ನೆ : ಸಾರ್ ಇವೆಲ್ಲಾ ನಿಜವಾಗ್ಲು ಸೇರಬೇಕಾದೋರ್ಗೆ ಸೇರಿದಾವಾ ಸಾರ್?

ಸಚಿವರು : ಖಂಡಿತ ಕಣ್ರೀ ಅನುಮಾನಾನ. ಬೇಕಾದ್ರೆ ಆ ಲೋಕಾಯುಕ್ತ ಅವ್ರಲ್ಲ, ವೆಂಕಟಾಚಲಯ್ಯ ಅಂತ ಅವರತ್ರನೆ ಕೇಳಿ ತಿಳ್ಕಳಿ. ಅವರೇ ಹೇಳ್ತರೆ ಯಾರ್ಯಾರಿಗೆ ಎಷ್ಟೆಷ್ಟು ಸಿಕ್ಕದೆ ಅಂತಾ..

ಪ್ರಶ್ನೆ : ಆಯ್ತು ಸಾರ್, ಈ ಕಡು ಬಡವರ ಸಲುವಾಗಿ ಏನು ಮಾಡಿದ್ದೀರಿ ಸಾರ್.

ಸಚಿವರು: ನೋಡಿ ಪಾಪ ಕಡು ಬಡವ ಅಂತಾ ಆ ಮಾಜಿ ಆಯುಕ್ತ ರಾಮ್‌ಸಾಮಿ ಒಬ್ನಿಗೆ 15 ಕೋಟಿ ರೂಪಾಯಿ ನಮ್ ಆದಾಯ್ದಲ್ಲಿ ಬಿಟ್‌ಕೊಟ್ಟಿದ್ದೀವಿ. ಎಲ್ಲಾ ಪೇಪರ್ನಲ್ಲೂ ಬಂದಿದ್ದು. ನಿಮ್ಗೇನ್ ಗೊತ್ತಿಲ್ವಾ?

ಪಾಪ, ನಮ್ ಕೌನ್ಸಿಲರ್ರೊಳು ಚುನಾವಣೆಗೆ ನಿಂತಾಗ ಬಡವ್ರ ಆಗಿದ್ರು. ಈಗ ನೀವೇ ಬೇಕಾದ್ರೆ ನೋಡಿ... ಸಾಮಾನ್ಯವಾಗಿ ಓಡಾಟಕ್ಕೆ ಕಾರು, ವಾಸಕ್ಕೆ ಒಳ್ಳೆ ಮನೆ, ಕೈಗೆ ಬ್ರಾಸ್‌ಲೈಟು, ಜೇಬಲ್ಲಿಟ್ಕಳಕ್ಕೆ ಮೊಬೈಲು, ಕುತ್ತಿಗೆಗೆ ಚಿನ್ನದ ಚೈನು ಎಲ್ಲಾ ಮಾಡ್ಕೊಟ್ಟಿದ್ದೀವಿ. ಈ ಸಲ ಗೆದ್ರೆ ಇನ್ನೂ ಬೇಕಾದಂಗೆ ಮಾಡ್ಕೊಡ್ತಿವಿ.

ಪ್ರಶ್ನೆ : ಸರಿ ಸಾರ್ ಇಷ್ಟೆಲ್ಲಾ ಸಾಧನೇನ ನೀವೇ ಮಾಡಿದ್ರಾ ಇಲ್ಲಾ ಬೇರೆ ಪಾರ್ಟಿಗಳ ಸಹಾಯನೂ ತಗಂಡ್ರ.

ಸಚಿವರು : ನೋಡ್ರಿ ನಮ್ ಯೋಜನೆ, ಸಾಧನೆಗೆ ಬೆರಗಾಗಿ 6 ಜನ ಕೌನ್ಸಿಲರ್‌ಗಳು ಪ್ರಾರಂಭಕ್ಕೇನೆ ಅವರ ಪಾರ್ಟಿ ಬಿಟ್ಟು ನಮ್ ಪಾರ್ಟಿಗೆ ಬಂದ್ರು, ಅಂದ್ರೆ ಅವರೂ ಕೂಡ ನಮ್ ಸಾಧನೆಗಳ ಭಾಗ ತಾನೆ? ಅಷ್ಟಾದ ಮೇಲೆ ಆ ಕಮಲ್ದೋರು, ಉಳಿದೋರು ನಮ್ ಜತ್ಗೆ ಅವರಷ್ಟಕ್ಕೆ ಅವರೆ ಒಡಂಬಡಿಕೆ ಮಾಡ್ಕಂಡ್ರು. ಯಾರೇನು ಕಮ್ಮಿ ಇಲ್ಲ, ಯಾರೇನು ಜಾಸ್ತಿ ಇಲ್ಲ. ಸಮನಾಗೆ ಕೈ ಜೋಡ್ಸಿ ಎಲ್ಲರೂ ಬಾಯ್ಮುಚ್ಕೊಳೋ ಸಾಧನೆ ಮಾಡಿವಿ. ಜಗತ್ತಿಗೆ ತೋರ್‍ಸಿವಿ.

ಪ್ರಶ್ನೆ : ನಿಮ್ ಸಾಧನೆಗಳಿಗೆ ಯಾರು ಅಡ್ಡಗಾಲು ಹಾಕ್ಲಿಲ್ವಾ ಸಾರ್.

ಸಚಿವರು : ಇಲ್ಲಾ ಬಿಡ್ರಿ. ಎಲ್ಲರ ಸಹಾಯ, ಸಹಕಾರದಿಂದ್ಲೆ ಅಂತಾ ಇಷ್ಟೊತ್ತು ಹೇಳೀನಲ್ಲ. ಆ ಕೆಂಬಾವುಟದೋರು ಆಗಾಗ ಬೀದಿಗೆ ಬಂದು ಹೋರಾಡೋರು. ನಾವು ಆದ್ಕೆನೆ ಅವರನ್ನು ಒಳಗಡೆ ಬಿಡ್ಲೆ ಬಾರ್ದು ಅಂತ ಎಲ್ಲರೂ ಒಟ್ಟಾಗಿ ತೀರ್ಮಾನ ಮಾಡ್ಕೊಂಡಿದ್ದೀವಿ. ಅವರು ಬಂದ್ರೆ ಕಷ್ಟ ನೋಡ್ರಿ

ಪ್ರಶ್ನೆ : ಗೆದ್ ಬಂದ್ರೆ ಏನೇನ್ ಮಾಡ್ತೀರಾ ಸಾರ್?

ಸಚಿವರು : ಈಗ ಮಾಡ್ತಿರವನ್ನೆಲ್ಲಾ ಮುಂದುವರಿಸ್ತೀವಿ ಜೊತೆಗೆ ಇನ್ನೂ ಹತ್ತಾರು ಮೂಲದಿಂದ ದುಡ್ಡು ಬಂದ್ ಬೀಳಂಗೆ ವ್ಯವಸ್ಥೆ ಮಾಡ್ತೀವಿ. ಈ ಸಲ ಒಂದಷ್ಟು ಬಡವ್ರನ್ನ ಸಾವ್‌ಕಾರ್‍ರು ಮಾಡ್ತೀವಿ.

ವಾರ್ಡುಗಳ ಅಭಿವೃದ್ಧಿಯೇ ಸಿಪಿಐ(ಎಂ) ಆದ್ಯತೆ

ವರ್ತೂರು ಪ್ರದೇಶ ಸಮಿತಿಯ ಸಿಪಿಎಂ ಕಾರ್ಯದರ್ಶಿ ಹೆಚ್.ಎನ್.ಗೋಪಾಲಗೌಡರ ಜೊತೆ ಸಂದರ್ಶನ



ಪ್ರಶ್ನೆ: ಈ ಚುನಾವಣೆಯಲ್ಲಿ ನೀವು ಎಷ್ಟು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೀರಿ?

● ಏಳು ವಾರ್ಡುಗಳಲ್ಲಿ ಸ್ಪರ್ಧೆಯಲ್ಲಿದ್ದೇವೆ.

ಪ್ರಶ್ನೆ : ಯಾವ ಹಿನ್ನೆಲೆಯಿಂದಾಗಿ ಏಳು ವಾರ್ಡುಗಳನ್ನು ಆಯ್ಕೆ ಮಾಡಿದ್ದೀರಿ?

● ಹೆಚ್‌ಎನ್‌ಜಿ: 1ನೇ ವಾರ್ಡಿನಲ್ಲಿ ಕಳೆದ ಬಾರಿ ನಮ್ಮ ಅಭ್ಯರ್ಥಿಯಾಗಿ ಗೌರಮ್ಮ ಕಣದಲ್ಲಿದ್ದರು. ಅತ್ಯಲ್ಪ ಮತಗಳಿಂದ ಪರಾಜಿತಗೊಂಡಿದ್ದರು. ಗಣನೀಯ ಮತ ನೀಡಿದ ವಾರ್ಡಿನಲ್ಲಿ ಚಟುವಟಿಕೆ ಮುಂದುವರೆಸಿದ್ದರು. ಮತ್ತೆ ಅಲ್ಲಿ ಸ್ಪರ್ಧಿಸಲಾಗಿದೆ.

ಇನ್ನು 7 ಮತ್ತು 11 ನೇ ವಾರ್ಡುಗಳಲ್ಲಿ ಆಟೋ ಚಾಲಕರು ಸಂಘಟಿತರಾಗಿ, ಜನರ ಮೂಲಭೂತ ಸೌಕರ್ಯಗಳಿಗಾಗಿ ಹೋರಾಟ, ಚಟುವಟಿಕೆಗಳನ್ನು ನಡೆಸಿದ್ದಾರೆ. ಜನರ ನಡುವೆ ಕ್ರಿಯಾಶೀಲರಾಗಿದ್ದಾರೆ. ಅಲ್ಲಿ ಇಬ್ಬರು ಆಟೋ ಚಾಲಕರು ಪ್ರಭಾಕರ್ ಮತ್ತು ಕೆ.ಜಿ.ಜಗನ್ನಾಥ್ ಅಭ್ಯರ್ಥಿಗಳಾಗಿದ್ದಾರೆ.

ಹಾಗೆಯೇ ವಾರ್ಡ್ ನಂ. 29 ರಲ್ಲಿ ಕಳೆದ ಹತ್ತಾರು ವರ್ಷಗಳಿಂದ ಚಟುವಟಿಕೆಗಳು, ಹೋರಾಟಗಳ ಮೂಲಕ ಕ್ರಿಯಾಶೀಲರಾಗಿದ್ದೇವೆ. ಇದೇ ವಾರ್ಡಿನ ನಿವಾಸಿ ಸಿಐಟಿಯು ಮುಖಂಡ ಜಯರಾಂ ಇಲ್ಲಿ ಸ್ಪರ್ಧಿಸಿರುತ್ತಾರೆ. ಇನ್ನುಳಿದಂತೆ 30, 31, 32 ವಾರ್ಡುಗಳಿರುವ ವಿಜಿನಾಪುರ ಸ್ಲಂ ಪ್ರದೇಶಕ್ಕೆ 4 ವರ್ಷಗಳ ನಿರಂತರ ಹೋರಾಟದ ಹಿನ್ನೆಲೆಯಿದೆ. 20 ಎಕರೆ ವ್ಯಾಪ್ತಿಯ ಸ್ಲಂ ಪ್ರದೇಶವನ್ನು ಹೋರಾಟದ ಮೂಲಕ ಡಿಕ್ಲೇರ್ ಮಾಡಿಸಿದ್ದೇವೆ. ಒಂದೂವರೆ ಸಾವಿರ ಕುಟುಂಬಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟಿವೆ. ನಾಗರಿಕ ಸೌಲಭ್ಯಗಳಿಗೆ ಕೆಲಸ ನಡೆಯುತ್ತಿದೆ. ಅಲ್ಲಿ ಶಿವಕುಮಾರ್, ರವಿಚಂದ್ರನ್, ಮಲ್ಲಿಕಾ ನಮ್ಮ ಅಭ್ಯರ್ಥಿಗಳಾಗಿದ್ದಾರೆ.

ಪ್ರಶ್ನೆ : ಚುನಾವಣೆಯಲ್ಲಿ ನಿಮ್ಮ ಪಕ್ಷಕ್ಕೆ ಸಹಾಯಕವಾಗಬಲ್ಲ ಅಂಶಗಳು ಯಾವುವು?

● ನೋಡಿ, ನಮ್ಮದು ಹೋರಾಟದ ಪಕ್ಷ. ಕಾರ್ಮಿಕರು ಜನಸಾಮಾನ್ಯರ ಸಮಸ್ಯೆಗಳ ವಿರುದ್ಧ ಕಳೆದ ಮೂವತ್ತು ವರ್ಷಗಳಿಂದ ನಾವಿಲ್ಲಿ ಚಟುವಟಿಕೆ ನಡೆಸುತ್ತಾ ಬಂದಿದ್ದೇವೆ. ಹಲವಾರು ಹೋರಾಟಗಳನ್ನು ಸಂಘಟಿಸಿದ್ದೇವೆ. ಈಗಲೂ ಆ ಚರಿತ್ರೆಯನ್ನು ಕಾಪಾಡಿಕೊಂಡಿದ್ದೇವೆ.

ಇತ್ತೀಚಿನ ಕೆಲವು ಉದಾಹರಣೆಗಳನ್ನು ನೀಡುವುದಾದರೆ ತೂಗು ಸೇತುವೆಯ ಜಾಗದಲ್ಲಿದ್ದ ಕಿರಿದಾದ ಸೇತುವೆಯಿಂದಾಗಿ ವಿಪರೀತ ಅಪಘಾತಗಳು ಸಂಭವಿಸುತ್ತಿದ್ದವು. ಸೇತುವೆ ಪುನರ್ನಿರ್ಮಾಣಕ್ಕೆ ಹತ್ತಾರು ಚಳುವಳಿಗಳನ್ನು ನಡೆಸಿದ್ದೇವೆ. ಉದಯನಗರ ಬಂದ್ ಮಾಡಿದ್ದೇವೆ. ನಂತರ ಕಾಮಗಾರಿ ಪ್ರಾರಂಭವಾದುದನ್ನು ನೆನಪಿಸಬಯಸುತ್ತೇವೆ.

ಕಾಮಗಾರಿ ಹಂತದಲ್ಲಿ ಧೂಳೆದ್ದು ಹಳ್ಳಮಯವಾಗಿದ್ದ ರಸ್ತೆಗೆ ಜಲ್ಲಿ, ಡಾಂಬರು ಹಾಕಿಸಿದ್ದೇವೆ. ಹೋರಾಟದ ಮೂಲಕ ಇದು ಸಾಧ್ಯವಾಗಿದೆ.

ಸೇತುವೆ ನಿರ್ಮಾಣದ ನಂತರ ದ್ವಿಚಕ್ರ ವಾಹನಗಳ ಸುಗಮ ಸಂಚಾರಕ್ಕೆ ಲೆವೆಲ್ ಕ್ರಾಸಿಂಗ್ ತೆರವುಗೊಳಿಸಲು ಯಶಸ್ವಿಯಾದ ರೈಲು ತಡೆ ನಡೆಸಿದ್ದೇವೆ. ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಅಧಿಕಾರಿಗಳ ಜೊತೆ ಮಾತುಕತೆ ಮಾಡಿದ್ದೇವೆ. ತೆರವುಗೊಳಿಸುವ ತನಕ ಹೋರಾಟ ಮುಂದುವರೆಸುತ್ತೇವೆ.

ಪ್ರಶ್ನೆ: ನಗರಸಭೆ ವ್ಯಾಪ್ತಿಯಲ್ಲಿ ವಿಪರೀತವಾದ ಅಭಿವೃದ್ಧಿ ಕುಲ್ಲುಗಳನ್ನು

ಪುಟ 2 ಕ್ಕೆ

ಭ್ರಷ್ಟರು ಮತ್ತೊಮ್ಮೆ ಮನೆ ಬಾಗಿಲಲ್ಲಿ !

ನೂರು ಕೋಟಿ ರೂಪಾಯಿಗಳ ಬ್ರಹ್ಮಾಂಡ ಭ್ರಷ್ಟಾಚಾರದ ಮೂಲಕ ಕೃಷ್ಣರಾಜಪುರ ನಗರಸಭೆಯನ್ನು ಜಗದ್ವಿಖ್ಯಾತಗೊಳಿಸಿದ ಕಾಂಗ್ರೆಸ್ ಈ ಬಾರಿಯೂ ಜನತೆಗೆ ಟೋಪಿ ತೊಡಿಸಲು ಸಜ್ಜಾಗಿದೆ. ಭಾರೀ ಆರ್ಭಟದ ಪ್ರಚಾರವನ್ನು ಆರಂಭಿಸಿದೆ. ಸಚಿವ ಎ.ಕೃಷ್ಣಪ್ಪನವರ ವರ್ಣಮಯ ವ್ಯಕ್ತಿತ್ವವನ್ನು ಬಿಂಬಿಸುವ ಹೊಸ ಪತ್ರಿಕೆಗಳನ್ನು ಮತದಾರರ ಮಧ್ಯೆ ಹರಿಯಬಿಟ್ಟು ಸಚಿವರಿಗೆ, ಸಚಿವರ ಪಕ್ಷಕ್ಕೆ ಹೊಸ ಇಮೇಜ್ ಸೃಷ್ಟಿಸುವ ಹೊಸ ಹೊಸ ತಂತ್ರಗಳು ಚಲಾವಣೆಯಲ್ಲಿವೆ. ನಗರಸಭಾ ವ್ಯಾಪ್ತಿಯಲ್ಲಿನ ರಸ್ತೆಗಳ ಹಳ್ಳ-ಕೊಳ್ಳ ಹೊಂಡಗಳನ್ನು ಮುಚ್ಚಲು ಕನಿಷ್ಠ ಮಣ್ಣಿನಿಂದಾದರೂ ವ್ಯವಸ್ಥೆ ಮಾಡದೇ ಹೋದ ಕಾಂಗ್ರೆಸ್ ಪಕ್ಷ ಕೋಟಿಗಟ್ಟಲೆ ಹಣವನ್ನು ಚುನಾವಣೆಗಾಗಿ ಚೆಲ್ಲಾಡುತ್ತಿದೆ. ಪ್ರದೇಶದ ಜನತೆಯ ಭವಿಷ್ಯಕ್ಕಿಂತ ಕೃಷ್ಣಪ್ಪನವರ ಭವ್ಯ ರಾಜಕೀಯ ಭವಿಷ್ಯವೇ ಕಾಂಗ್ರೆಸ್ ಪಾಲಿಗೆ ಇದೊಂದು ಪ್ರತಿಷ್ಠಿತ ಚುನಾವಣೆಯಾಗಲು ಕಾರಣವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಗುರಿಯಾಗಿಸಿಕೊಂಡು ಸಿಎಂಸಿ ಯನ್ನು ಭದ್ರ ಪಡಿಸಿಕೊಳ್ಳಲು ಮುಂದಾಗಿರುವ ಕೃಷ್ಣಪ್ಪನವರ ಪಡೆ, ಕ್ಷೇತ್ರದಲ್ಲಿ ಕಣ್ಣಿಗೆ ಕಾಣುವ ಅಂದ-ಚಂದದ ಮನೆಗಳನ್ನು ಕಟ್ಟಿಸಿಕೊಟ್ಟವರೂ ನಾವೇ ಎನ್ನುವ ಮಟ್ಟಕ್ಕೆ ಪ್ರಚಾರಕ್ಕಿಳಿದಿದೆ.

ಎಷ್ಟರವಟ್ಟಿಗೆ ಎಂದರೆ ಏಷ್ಯಾದಲ್ಲೇ ಪ್ರಥಮವೆನಿಸಿರುವ ತೂಗಾಡುತ್ತಿರುವ ಸೇತುವೆ ನಮ್ಮಿಂದಾದದ್ದು ಹಾಗೆ ವಿಶ್ವವಿಖ್ಯಾತ ಐ.ಟಿ.ಪಾರ್ಕ್ ನಾವು ಮಾಡಿದ್ದು, ಬೆನ್ನಿಗಾನಹಳ್ಳಿ, ಬಿ.ನಾರಾಯಣಪುರಗಳ ಸೇತುವೆ ನಾವು ಕಟ್ಟಿದ್ದು, ಉದ್ದುದ್ದ-ಅಗಲಗಲ ರಸ್ತೆಗಳಿಗೆ ನಾವೇ ಮಣ್ಣು ಹೊತ್ತಿದ್ದು, ಟಾರು ಹಾಕಿದ್ದು. ಇನ್ನೇನು ಕಾವೇರಿಯನ್ನು ಕೃಷ್ಣರಾಜ ಪುರಕ್ಕೆ ಹರಿಸಬೇಕೆನ್ನುವಷ್ಟರಲ್ಲಿ ಈ ಚುನಾವಣೆ ಅಡ್ಡ ಬಂತು. ಈಗಲೂ ಕಾಲ ಮಿಂಚಿಲ್ಲ. ನಮ್ಮನ್ನು ಗೆಲ್ಲಿಸಿ ನೋಡಿ 10 ಕ್ಕೆ ಚುನಾವಣೆ ಮುಗಿಯುತ್ತಿದ್ದಂತೆ 11 ಕ್ಕೆ ಕಾವೇರಿಯನ್ನು ನಿಮ್ಮ ಮನೆ ಬಾಗಿಲಲ್ಲಿ ನಿಲ್ಲಿಸುತ್ತೇವೆ. ಬಾಕಿ ಉಳಿದ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸುತ್ತೇವೆ ಮುಂತಾಗಿ ಕಾಂಗ್ರೆಸ್ ಎಗ್ಗಿಲ್ಲದ ಪ್ರಚಾರ ನಡೆಸಿದೆ.

3 ಲಕ್ಷ ರೂಪಾಯಿ ಬೆಲೆ ಬಾಳುವ ಹೈ ಮಾಸ್ಕ್ ಲೈಟ್‌ಗಳನ್ನು 9 ಲಕ್ಷಕ್ಕೆ ಖರೀದಿಸಿದ ಲೆಕ್ಕ ತೋರಿಸಿದ್ದು, 3000 ರೂಪಾಯಿಗಳ ಮೌಲ್ಯದ ಸೋಡಿಯಂ ಲೈಟ್‌ಗಳಿಗೆ 6000 ಬಿಲ್ ತೋರಿಸಿದ್ದು, 2,100 ರೂಪಾಯಿಗಳ ಟೈಲರಿಂಗ್ ಮೆಷಿನ್‌ಗಳನ್ನು 4,500 ರೂಪಾಯಿಯೆಂದು ಮರೆ ಮಾಚಿದ್ದು, ಇಲ್ಲದ ರಸ್ತೆಗಳಿಗೆ ಡಾಂಬರು ಹಾಕಿಸಿದ್ದು. ಫೈಲುಗಳಲ್ಲೆ ಹೊಸ-ಹೊಸ ರಸ್ತೆಗಳನ್ನು ನಿರ್ಮಿಸಿದ್ದು, ಚರಂಡಿ, ಮೋರಿಗಳ ಕಸ ತೆಗೆಸಲೆಂದು ಸುಳ್ಳು ಲೆಕ್ಕ ಬರೆದದ್ದು, ಇಷ್ಟೆಲ್ಲಾ ಅವ್ಯಹಾರದ ಒಟ್ಟು ಮೊತ್ತ 100 ಕೋಟಿ ಆದದ್ದು. ಲೋಕಾಯುಕ್ತರು ಅವ್ಯವಹಾರವನ್ನು ಬೀದಿಗೆ ತಂದಿದ್ದು ಈ ಪಟ್ಟಿಯನ್ನು ಕಾಂಗ್ರೆಸ್ ಮರೆಮಾಚಿದ್ದು ಜನ ಮರೆಯಬೇಕಲ್ಲ!

ಮುಖ್ಯ ರಸ್ತೆಗಳು ಟಾರು ಕಂಡಿರಬಹುದು. ಸಾಮಾನ್ಯ ಜನರ ಜೇಬು ಕಸಿದು ಕೇಂದ್ರ ಸರ್ಕಾರ ಸೇತುವೆಯನ್ನು ತೂಗುಬಿಟ್ಟಿರಬಹುದು. ವಿದೇಶಿ ಬಂಡವಾಳಿಗರನ್ನು ಆಕರ್ಷಿಸಿ ಕಮಿಷನ್ ಹೊಡೆಯಲು ಹೈಟೆಕ್ ಮುಖ್ಯಮಂತ್ರಿ ಐಟಿಪಿಎಲ್ ಪಾರ್ಕ್ ಮಾಡಿರಬಹುದು. ಆದರೆ ಬಹು ಸಂಖ್ಯಾತರ ಬದುಕನ್ನು ಕಾಣಲು ಮುಖ್ಯರಸ್ತೆಗಳಿಂದ ಜನವಾಸಿತ ಪ್ರದೇಶಗಳಿಗೆ ಪ್ರವೇಶಿಸಬೇಕು.

ನಾಲ್ಕು-ಐದು ದಿನಕ್ಕೊಮ್ಮೆ ಕಾಣಿಸಿಕೊಳ್ಳುವ ಕುಡಿಯುವ ನೀರು; ಮಣ್ಣು-ಕಸ-ಕಡ್ಡಿ ಪಾಯಖಾನೆಗಳಿಂದ ತುಂಬಿ ಹೋಗಿರುವ ಅವ್ಯಸ್ಥಿತ ಮೋರಿಗಳು, ಆಳುದ್ದ ಗುಂಡಿ ಬಿದ್ದು ಧೂಳಿದ್ದಿರುವ ರಸ್ತೆಗಳು, ಲೈಟುಗಳೇ ಇಲ್ಲದ ವಿದ್ಯುತ್ ಕಂಬಗಳು, ಮನುಷ್ಯನ ಘನತೆಗೆ ಕನಿಷ್ಠ ಅವಶ್ಯಕತೆಗಳೂ ಇಲ್ಲದ ಹತ್ತಾರು ಸ್ಲಮ್ಮುಗಳ ದಿವ್ಯ ದರುಶನವಾಗುತ್ತದೆ, ಒಳ ಹೊಕ್ಕಾಗ.

ಮುಗ್ಧ ಮಹಿಳೆಯರು ಕೇಳುತ್ತಿದ್ದಾರೆ "ಇವುಗಳನ್ನು ಸರಿಪಡಿಸುವ ಸಲುವಾಗಿ ಬಂದ ಹಣ ತಾನೆ ಅದು ನೂರು ಕೋಟಿ ರೂಪಾಯಿ ಅಂತ'. ಜನಸಾಮಾನ್ಯರ ತೆರಿಗೆಯ ಹಣ, ನೀರು, ಮೋರಿ, ರಸ್ತೆ, ಚರಂಡಿ, ಶೌಚಾಲಯ, ವಿದ್ಯುದ್ದೀಪಗಳ ನಿರ್ಮಾಣಕ್ಕಾಗಿ ಮೀಸಲಿಟ್ಟ ಕೋಟಿಗಟ್ಟಲೆ ಹಣವನ್ನು ನುಂಗಿ ನೀರು ಕುಡಿದ ಧನದಾಹಿ ಕಾಂಗ್ರೆಸ್ಸಿಗರಿಗೆ ಮತ್ತೆ ಅಧಿಕಾರವನ್ನು ಧಾರೆ ಎರದರೆ ಮುಂದಿನ ದಿನಗಳಲ್ಲಿ ನಗರಸಭೆಯ ಜಾಗವಾದರೂ ಉಳಿದೀತೆ?ಯೋಚನೆ ಮಾಡುವುದು ಮತದಾರರ ಜವಾಬ್ದಾರಿ.

ರಸ್ತೆ-ಮೋರಿ-ಶೌಚಾಲಯಗಳನ್ನೇ ನುಂಗಿದ ಕಾಂಗ್ರೆಸ್ಸಿನ ಅಪಖ್ಯಾತಿಯ ಲಾಭ ಪಡೆಯಲು ಬಿಜೆಪಿ ನುಗ್ಗಿದೆ. ಇವರ ಬಗ್ಗೆ ಈಗಾಗಲೇ ಚಡ್ಡಿ ಹುಡುಗರು ಮಾತಾಡಿಕೊಳ್ಳುತ್ತಿದ್ದಾರೆ. ದೇಶ ಹಾಳುಗೆಡವಲು ಕಾಂಗ್ರೆಸ್ಸಿಗೆ ಐವತ್ತು ವರ್ಷವಾದರೆ ಬಿಜೆಪಿಗೆ ಐದೇ ವರ್ಷ ಎಂದು. ಕಾಂಗ್ರೆಸ್ಸಿನ ಎಲ್ಲ ಅನಿಷ್ಟಗಳನ್ನು ಮೈಗೂಡಿಸಿ ಕೊಂಡಿರುವ ಬಿಜೆಪಿಗೆ ಮೇಲಾಗಿ ಇನ್ನೊಂದು ಖಾಯಿಲೆಯೂ ಇದೆ. ಜಾತಿ-ಧರ್ಮ-ಭಾಷೆ ಮುಂತಾದ ಹೆಸರಿನಲ್ಲಿ ಜನರ ತಲೆ ಹೊಡೆಯುವ ಕುಖ್ಯಾತಿ ಕಾಯಿಲೆಯದು.

ಇವರೇನಾದರೂ ಅಧಿಕಾರಕ್ಕೆ ಬಂದರೆ 'ಇದ್ದರೆ ಉಣ್ಣುವುದು ಇಲ್ಲವಾದರೆ ನೀರು ಕುಡಿದು ಮಲಗುವುದು' ಎನ್ನುವ ಪರಿಸ್ಥಿತಿಗೂ ಅವಕಾಶವಿಲ್ಲ. ಯಾವಾಗ ಗಲಾಟೆಯೋ? ಎಲ್ಲಿ ಗಲಾಟೆಯೋ? ಯಾರ ತಲೆ ಯಾರು ಹೊಡೆದ್ರೊ? ಮುಂತಾದ ಆತಂಕದಲ್ಲೇ ಬದುಕಿದ್ದೂ ಸಾಯಬೇಕು. ಹೀಗಾಗಿ ಹಿಂಸೆಗೆ ಕುಖ್ಯಾತವಾಗಿರುವ ಬಿಜೆಪಿಯನ್ನು ಎಲ್ಲಿಡಬೇಕೋ ಅಲ್ಲಿಡುವುದೇ ಸೂಕ್ತ.

ಒಂದೇ ನಾಣ್ಯದ ಎರಡು ಮುಖಗಳಾಗಿರುವ ಕಾಂಗ್ರೆಸ್ - ಬಿಜೆಪಿಗಳಿಗೆ ಪರ್ಯಾಯವಾಗಿ ಸ್ಪರ್ಧೆ ಮಾಡಿರುವ ಜನತಾದಳವು ಸಹ ಈ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಕೆಲಸಗಳನ್ನು ಮಾಡಲಿಲ್ಲ.

ಇವರಿಬ್ಬರ ಆರ್ಥಿಕ ನೀತಿಗಳ ವಿರುದ್ಧವಾಗಿ ಯಾಗಲೀ ಸಿಎಂಸಿ ಭ್ರಷ್ಟಾಚಾರದ ವಿರುದ್ಧವಾಗಲೀ, ಅಭಿವೃದ್ಧಿ ಕಾಮಗಾರಿಗಳಿಗೆ ಆಗ್ರಹಿಸಿಯಾಗಲೀ ಬೀದಿಗಿಳಿದು ಸೆಣಸಾಡಿ ದವರೂ ಅಲ್ಲ. ಕಾರ್ಖಾನೆಗಳು ಮುಚ್ಚಿ ಸಾವಿರಾರು ಕಾರ್ಮಿಕರು ಬೀದಿಪಾಲಾದಾಗ ಕಾರ್ಮಿಕರ ಪರವಾಗಿ ನಿಂತವರೂ ಅಲ್ಲ. ನಿಮ್ಮ ದುರ್ಬಲತೆಯೆ ನಮಗೆ ಲಾಭವೆಂದು ಕಾಂಗ್ರೆಸ್ ಬಿಜೆಪಿಗೆ ಪರ್ಯಾಯವಾಗಿ ಸ್ಪರ್ಧಿಸಿದೆ ಈ ಪಕ್ಷ.

ಸಿಪಿಐ(ಎಂ) ಹತ್ತಾರು ಜನಪರ ಹೋರಾಟಗಳ ಹಿನ್ನೆಲೆಯಲ್ಲಿ ಜನರ ನಡುವೆ ಕೆಲಸ ಮಾಡುವ ಅಭ್ಯರ್ಥಿಗಳನ್ನು ಆರಿಸಿ ಕಣಕ್ಕಿಳಿಸಿದೆ. 35 ವಾರ್ಡುಗಳ ಕೃಷ್ಣರಾಜಪುರ ನಗರಸಭೆ ಪ್ರತಿಷ್ಠಿತ ಕಣವಾಗಿ ಸಜ್ಜಾಗಿದೆ. ಇದೇತಿಂಗಳ 10 ಕ್ಕೆ ನಡೆಯಲಿರುವ ಚುನಾವಣೆಗೆ ಇದೇ ಮೊದಲ ಬಾರಿಗೆ ಸಿಪಿಐ(ಎಂ) ಪಕ್ಷ ಏಳು ವಾರ್ಡುಗಳಲ್ಲಿ ಸ್ಪರ್ಧೆಗಿಳಿದಿದೆ.

ಜನಪರ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ನಗರಸಭೆಯ ಸಭೆಗಳಲ್ಲಿ ನಿರಂತರ ಭಾಗವಹಿಸಿ ಜನಸಾಮಾನ್ಯರ ಸಮಸ್ಯೆಗಳನ್ನು ಬಿಂಬಿಸಲು ಜೊತೆಗೆ ತೀರ್ಮಾನಗಳನ್ನು ಕೈಗೊಳ್ಳಲು ಅಭಿವೃದ್ಧಿ ಕಾರ್ಯಗಳನ್ನು ಪ್ರಾಮಾಣಿಕವಾಗಿ, ಪಾರದರ್ಶಕವಾಗಿ ಜನರಿಗೆ ತಲುಪಿಸಲು ಅವಕಾಶ ಕಲ್ಪಿಸಬೇಕಾಗಿದೆ.

ಪ್ರಶ್ನೋತ್ತರ

ಕೆ.ಆರ್.ಪುರಂನಲ್ಲಿ ಮಂಗಣ್ಣಗಳ ಹಾವಳಿಯಂತೆ ಹೌದೇನಕ್ಕಾ ?

■ ಊಕಣಕ್ಕ, ಹೆಂಗಸ್ರು, ಮಕ್ಕಳು ಕೈಗೆ ಸಿಕ್ಕಿದ್ನ ತಗಂಡವ್ರೆ ಅಂತ ಗೊತ್ತಾಗಿ ಆ ವಾರ್ಡಿನಿಂದ ಈ ವಾರ್ಡಿಗೆ, ಈ ವಾರ್ಡಿನಿಂದ ಆ ವಾರ್ಡಿಗೆ ನೆಗೆದಾಡ್ತಾ ಅವಂತೆ ನುಂಗಣ್ಣಗಳು

ವಾರ್ಡುಗಳ ಅಭಿವೃದ್ಧಿಯೇ ಸಿಪಿಐ(ಎಂ) ಆದ್ಯತೆ

ಹೇರಲಾಗಿತ್ತು. ಆಗ ನಿಮ್ಮ ಪಾತ್ರ ಏನಾಗಿತ್ತು.

● ಒಂದು ಚದರ ಅಡಿಗೆ 110 ರೂಪಾಯಿಗಳ ಅಭಿವೃದ್ಧಿ ಶುಲ್ಕ ವಿಧಿಸಿ ಕಾಂಗ್ರೆಸ್ ಸರ್ಕಾರ ಆದೇಶ ಹೊರಡಿಸಿದಾಗ ಎಲ್ಲಾ ಪಕ್ಷಗಳು ಅದರ ಪರವಾಗಿದ್ದವು. ಜನತಾದಳ ಅಭಿವೃದ್ಧಿ ಶುಲ್ಕ ಕಟ್ಟಬೇಕೆಂದು ತಾಕೀತು ಮಾಡಿತು. ಬಿಜೆಪಿಯ ನಿಲುವು ಇದೇ ಆಗಿತ್ತು. ಇದಕ್ಕೆ ವಿರೋಧವಾಗಿ ನಿಂತ ಏಕೈಕ ಪಕ್ಷ ನಮ್ಮದು ಮಾತ್ರ. ಹೀಗಾಗಿ ನಾವು ಅಭಿವೃದ್ಧಿ ಹೆಸರಿನಲ್ಲಿ ಬಂದ ಈ ಸುಲಿಗೆಯನ್ನು ಹಿಮ್ಮೆಟ್ಟಿಸಲು ಯುವ ಜನ ಸಂಘಟನೆಯ ನೇತೃತ್ವದಲ್ಲಿ ನಿರಂತರ ಹೋರಾಟ ನಡೆಸಿದೆವು.

ಕಾನೂನಿನ ಮೂಲಕ ಒಂದು ಕಡೆ, ಜನರಿಂದ ಹೋರಾಟ ಮತ್ತೊಂದು ಕಡೆ ನಡೆಸುವ ಮೂಲಕ ಇಂದು ಅಭಿವೃದ್ಧಿ ಶುಲ್ಕವನ್ನು ಕಟ್ಟುವಂತಿಲ್ಲವೆಂಬ ಕೋರ್ಟಿನ ತೀರ್ಪನ್ನು ಪಡೆಯಲು ಸಾಧ್ಯವಾಗಿದೆ.

ಪ್ರಶ್ನೆ: ಇದು ದೊಡ್ಡ ಕೈಗಾರಿಕಾ ಪ್ರದೇಶ. ಇಲ್ಲಿ ಕಾರ್ಮಿಕರ ಮತಗಳು ನಿರ್ಣಾಯಕವಾಗಿವೆ. ಅವರ ಸಲುವಾಗಿ ನೀವು ಏನನ್ನು ಮಾಡಿದ್ದೀರಿ?

● ಈಗಾಗಲೇ ತಿಳಿಸಿದಂತೆ ನಮಗೆ ಈ ಪ್ರದೇಶದಲ್ಲಿ ಮೂವತ್ತು ವರ್ಷಗಳ ಹೋರಾಟದ ಇತಿಹಾಸ.ಅವೆಲ್ಲ ಹೇಳುವುದು ಬೇಡ. ಇತ್ತೀಚೆಗೆ ಭರೂಕ ಗ್ಯಾಸಸ್, ಪೆರಿವಾಲ್ ಪ್ಲಾಸ್ಟಿಕ್ಸ್, ಮೆಕ್‌ನಲಿ, ಕೇವಲ್ ರಮಣಿ, ಬಿಪಿಎಲ್ ಕಾರ್ಖಾನೆಗಳ ಸಾವಿರಾರು ಕಾರ್ಮಿಕರಿಗೆ ಕಾನೂನು ಬದ್ಧ ಸೌಲಭ್ಯಗಳನ್ನು ಕಲ್ಪಿಸಿಕೊಡಲು, ನ್ಯಾಯ ದೊರಕಿಸಿಕೊಡಲು ಹಗಲಿರುಳೆನ್ನದೆ ನಿರಂತರ ಹೋರಾಟ ನಡೆಸಿ ಯಶಸ್ವಿಯಾಗಿದ್ದೇವೆ. ಕಾರ್ಮಿಕರ ಪರವಾಗಿ ನಿಂತು ಮಾಲೀಕರ, ಪೊಲೀಸರ, ಗೂಂಡಾಗಳ, ಕಾಂಗ್ರೆಸ್-ಬಿಜೆಪಿ-ಜನತಾದಳ ಪಕ್ಷಗಳ ದಾಳಿ-ದಬ್ಬಾಳಿಕೆಗಳನ್ನು ಎದುರಿಸಿದ್ದೇವೆ. ಕಾರ್ಮಿಕರ ಹಿತ ರಕ್ಷಿಸಿದ್ದೇವೆ. ಕಾರ್ಮಿಕರ ಹಿತ ರಕ್ಷಣೆಗಾಗಿ ಸುಳ್ಳು ಮೊಕದ್ದಮೆಗಳ ಮೇಲೆ ಕೋರ್ಟು, ಕಚೇರಿ, ಸೆರೆವಾಸಗಳಿಗೂ ತಳ್ಳಲ್ಪಟ್ಟಿದ್ದೇವೆ.

ಪ್ರಶ್ನೆ: ಚುನಾವಣೆಗಳ ಸಮಯದಲ್ಲಿ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ಇನ್ನೊಂದು ಮುಖ್ಯ ವಿಭಾಗ ಕಡು ಬಡ ಕುಟುಂಬಗಳು ಹಾಗೂ ಸ್ಲಮ್ಮುಗಳು. ಇವರ ಮತಗಳು ನಿಮಗೆ ದೊರಕುವವೆ?

● ನೋಡಿ, ವಿಜಿನಾಪುರ ಪ್ರದೇಶ 29 ಎಕರೆ ಜಮೀನನ್ನು ಆವರಿಸಿಕೊಂಡಿರುವ ಸ್ಲಂ ಪ್ರದೇಶ. ಇಲ್ಲಿ ವಾಸಿಸುವ ಎಲ್ಲ ಕುಟುಂಬಗಳು ಕಡುಬಡವರವೆ. ಇಲ್ಲಿಂದ ಅವರನ್ನು ಒಕ್ಕಲೆಬ್ಬಿಸಿ ಜಾಗ ಹೊಡೆಯುವ ಸಂಚನ್ನು ಇತರೆ ಪಕ್ಷಗಳು ರೂಪಿಸಿದ್ದವು. ನಾವು ಮಧ್ಯ ಪ್ರವೇಶ ಮಾಡಿ ಯುವಜನ, ಮಹಿಳಾ ಸಂಘಟನೆಗಳ ಮೂಲಕ ಜಾಗೃತಿ ಮೂಡಿಸಿ, ಸಂಘಟನೆ ಬೆಳೆಸಿ ಸತತವಾಗಿ 4 ವರ್ಷ ಚಳುವಳಿ ನಡೆಸಿದ್ದೇವೆ. ಅಂತಿಮವಾಗಿ ಆ ಜಾಗ ಅಲ್ಲಿನ ಬಡ ಕುಟುಂಬಗಳಿಗೆ ಸಿಕ್ಕಿದೆ. ಸ್ಲಂ ಪ್ರದೇಶವೆಂದು ಡಿಕ್ಲೇರ್ ಆಗಿದೆ. ಆ ಪ್ರದೇಶದಲ್ಲಿ ನಮ್ಮವರು ಮೂವರು ಅಭ್ಯರ್ಥಿಗಳಿದ್ದಾರೆ. ಅವರೂಸಹ ಅದೇ ಸ್ಲಮ್ಮಿನ ನಿವಾಸಿಗಳು. ಖಂಡಿತ ಅವರು ಗೆಲ್ಲುತ್ತಾರೆಂಬ ಭರವಸೆ ನಮಗಿದೆ.

ಪ್ರಶ್ನೆ: ಅದು ಸರಿ, ಅಭಿವೃದ್ಧಿ ಸಲುವಾಗಿನ ಹಣ ಲೂಟಿಯಾದಾಗ ನೀವೇನು ಮಾಡಿದಿರಿ?

● ಬಹುಶಃ ನಮ್ಮ ಪಕ್ಷದ ಪ್ರತಿನಿಧಿಗಳು ನಗರಸಭೆಯಲ್ಲಿದ್ದಿದ್ದರೆ, ಅಲ್ಲಿ ನಡೆಯುವ ಎಲ್ಲಾ ವಿವರಗಳನ್ನು ಜನರಿಗೆ ನೀಡುತ್ತಿದ್ದರು. ಭ್ರಷ್ಟಾಚಾರ ತಡೆಯುವ ಸಾಧ್ಯತೆಗಳಿದ್ದವು. ಆದರೆ ಅಂತಹ ಅವಕಾಶ ನಮಗಿರಲಿಲ್ಲ. ಆದರೂ ನಮ್ಮ ಪಕ್ಷ ಆಗಾಗ ಕಾಮಗಾರಿಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ಬಯಲಿಗೆಳೆದು ಪ್ರತಿಭಟನೆಗಳನ್ನು ನಡೆಸುತ್ತಿದ್ದೆವು. ಜನರಿಗೆ ತಿಳಿಸುತ್ತಿದ್ದೆವು.

ಲೋಕಾಯುಕ್ತರು ದಾಳಿ ನಡೆಸಿ ವಿವರಗಳನ್ನು ಬಹಿರಂಗಪಡಿಸಿದ ಮೇಲಂತು ನಾವು ಒಂದುವಾರ ಕಾಲ ಆಟೋ ಪ್ರಚಾರ ನಡೆಸಿ ಜನಜಾಗೃತಿ ಮೂಡಿಸಿದೆವು. ನಂತರ ಸ್ಥಳೀಯವಾಗಿ ಪ್ರತಿಭಟನೆಗಳನ್ನು ನಡೆಸಿ ಛೀಮಾರಿ ಹಾಕಿದೆವು. ಅಂತಿಮವಾಗಿ ಜಿಲ್ಲಾ ಮಟ್ಟದ ರ್‍ಯಾಲಿ ನಡೆಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆವು.

ಆದರೆ ತನಿಖೆ ನಡೆದು ವರದಿ ಬರುವ ಮುಂಚೆಯೇ ಕಾಂಗ್ರೆಸ್ ಆಡಳಿತ ಅಧಿಕಾರಿಗಳನ್ನು ಭಡ್ತಿ ಮೇರೆಗೆ ಪುನರ್‌ನೇಮಕ ಮಾಡಿಕೊಂಡಿತು. ಮಂತ್ರಿ ಕೃಷ್ಣಪ್ಪನವರಿಗೆ ರಕ್ಷಣೆ ನೀಡಿತು.

ಪ್ರಶ್ನೆ: ಒಂದು ಕಡೆ ಅಭಿವೃದ್ಧಿ ಹಣ ನುಂಗುವ ಭೂಪರು ಮತ್ತೊಂದು ಕಡೆ ಬಡವರನ್ನು ಹಿಂಡಿ-ಹೀರುವ ಕೇಂದ್ರ-ರಾಜ್ಯ ಸರ್ಕಾರದ ನೀತಿಗಳು. ಈ ಮಧ್ಯೆ ನಿಮ್ಮ ಜವಾಬ್ದಾರಿ ಏನಾಗಿತ್ತು?

● ಇಂತಹ ಅಪಾಯದ ಕುರಿತು ಜನಜಾಗೃತಿ ಮೂಡಿಸಿ ಜನಚಳುವಳಿ ಕಟ್ಟುವುದೊಂದೇ ಉಪಾಯ. ಇದರ ಭಾಗವಾಗಿ ಮೇ 21 ರಂದು ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ನಮ್ಮ ಪ್ರದೇಶದಲ್ಲಿಯೂ ಯಶಸ್ವಿ ಮಾಡುವ ಮೂಲಕ ಸಾವಿರಾರು ಜನರನ್ನು ನಾವು ಬೀದಿಗಿಳಿಸಿದ್ದೆವು. ಜನವಿರೋಧಿ ನೀತಿಗಳ ವಿರುದ್ಧ ಈ ಪ್ರದೇಶದಲ್ಲಿ ಬಂದ್ ಆಚರಿಸಲಾಯಿತು.

ಪ್ರಶ್ನೆ: ಈ ಬಾರಿ ತಮ್ಮ ಪಕ್ಷದ ಸದಸ್ಯರು ಸಿಎಂಸಿ ಪ್ರವೇಶಿಸುವರೇ?

● ಖಂಡಿತಾ. ಕಾಂಗ್ರೆಸ್, ಜನತಾದಳಗಳ ಆಳ್ವಿಕೆಯನ್ನು ಕಣ್ಣಾರೆ ಕಂಡ ಜನ ರೋಸಿ ಹೋಗಿದ್ದಾರೆ. ಅಭಿವೃದ್ಧಿ ಕೆಲಸಗಳು ಫೈಲುಗಳಲ್ಲಷ್ಟೇ ಉಳಿದಿವೆ. ನಾಗರೀಕ ಸೌಲಭ್ಯಗಳ ಕೊರತೆಯಿಂದಾಗಿ ಜನರಲ್ಲಿ ನಿರಾಶೆ ಮೂಡಿದೆ. ಮೇಲಾಗಿ ಮತದಾರರು ನಮ್ಮ ಹೋರಾಟಗಳನ್ನು, ಚಟುವಟಿಕೆಗಳನ್ನು ನೋಡಿದ್ದಾರೆ. ನಮ್ಮನ್ನು ಬೆಂಬಲಿಸುತ್ತಾರೆ.

ಪ್ರಶ್ನೆ: ನೀವು ಗೆದ್ದಲ್ಲಿ ನಿಮ್ಮ ಆದ್ಯತೆಯೇನು?

● ವಾರ್ಡುಗಳ ಅಭಿವೃದ್ಧಿ, ರಸ್ತೆ- ಮೋರಿಗಳನ್ನು ವ್ಯವಸ್ಥಿತಗೊಳಿಸುವುದು. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು. ಶುಚಿತ್ವಕ್ಕೆ ಗಮನ ನೀಡುವುದು. ಹಿಂದುಳಿದ ಪ್ರದೇಶ ಹಾಗೂ ಸ್ಲಮ್ಮುಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು. ಭ್ರಷ್ಟಾಚಾರವಿಲ್ಲದೆ ಕಾಮಗಾರಿಗಳನ್ನು ಜಾರಿಗೊಳಿಸುವುದು. ನಗರಸಭೆಯ ಆಳ್ವಿಕೆ ತೀರ್ಮಾನಗಳನ್ನು ಜನರ ಮುಂದಿಡುವುದು. ಒಟ್ಟಾರೆ ಜನಪರವಾದಂತಹ ಕೆಲಸಗಳಿಗೆ ತೊಡಗುವುದು. ಆಡಳಿತ ಪಾರದರ್ಶಕವಾಗಿರುವಂತೆ ಒಳಗೂ-ಹೊರಗೂ ಹೋರಾಡುವುದು ಮತ್ತು ಈ ಪ್ರದೇಶದ ಕೋಮುಸೌಹಾರ್ದತೆಯನ್ನು ಕಾಪಾಡುವುದು ನಮ್ಮ ಆದ್ಯತೆಯಾಗಿದೆ.

ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಆಗಸ್ಟ್ 10, 2003
ವಿಶೇಷ ಸಂಚಿಕೆ ಬೆಲೆ ರೂ. 2.00

ಕೆ.ಆರ್.ಪುರಂ ನಗರಸಭಾ ಚುನಾವಣಾ ಹಿನ್ನೆಲೆಯಲ್ಲಿ....

ಗಸ್ತುವಾರಿ ಸಚಿವರೊಂದಿಗೆ ಅಣಕ ಸಂದರ್ಶನ

ಪ್ರಶ್ನೆ : ಈ ಬಾರಿ ಚುನಾವಣೆ ನಿಮಗೆ ಆಶಾದಾಯಕವಾಗಿದೆಯೇ?

ಸಚಿವರು : ಏಕಿಲ್ಲ, ನೋಡಿ ರಸ್ತೆ ಮೇಲ್ ಕಟ್ಟೋ ಪ್ಲಾಸ್ಟಿಕ್ ಚೀಲಕ್ಕೆ ಎಷ್ಟು ಬಂಡವಾಳ ಸುರಿದಿದ್ದೀವಿ. ಹಾಗೆ ಮನೆ ಮನೆಗೊಂದು ಬ್ಯಾನರ್ ಕಟ್ಟಿದ್ದೀವಿ, ರಸ್ತೆಗೊಂದು ಆಟೋ ತಿರುಗಾಡಿಸ್ತಾ ಇದ್ದೀವಿ. ಗುಂಡು-ತುಂಡು ಕೊಟ್ಟು ಕಾರ್ಯಕರ್ತರನ್ನು ಬಿಟ್ಟಿದ್ದೀವಿ. ಮೇಲಾಗಿ ನಾನು ಬೀದಿ - ಬೀದಿಲಿ ಮೆರವಣಿಗೆ ಹೋಗಿ ಕೈ ಮುಗ್ದಿದ್ದೀನಿ. ಅಲ್ಲಾ ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕಿದ್ದೀವಿ. ಗೆಲ್ಲೇಬೇಕು ಅಂತ ತಾನೆ ಇಷ್ಟು ಮಾಡ್ತಿದ್ದೀವಿ.

ಪ್ರಶ್ನೆ : ಆದ್ಸರಿ, ಕಳೆದ ಬಾರಿ ಅಧಿಕಾರದಲ್ಲಿ ಇದ್ದೋರು ನೀವು. ನಿಮ್ಮ ಸಾಧನಗೆಳ ಕುರಿತು ಹೇಳ್ತೀರಾ.

ಸಚಿವರು : ಅಯ್ಯೋ, ಒಂದಲ್ಲ ಎರಡಲ್ಲ ಬೇಕಾದಷ್ಟು. ಮುಖ್ಯವಾದ್ದು ಅಂದ್ರ ಅದೇ ನೂರುಕೋಟಿ ವ್ಯವಹಾರದ್ದು. ಅಲ್ಲ ಕೆ.ಆರ್. ಪುರ ಯಾರಿಗ್ರೀ ಗೊತ್ತಿತ್ತು. ಕೆ.ಆರ್.ಪುರ ಅಂದ್ರೆ ಏನು? ನಗರ ಸಭೆ ಅಂದ್ರೆ ಏನು? ಅಂತ ಜಗತ್ತಿಗೇ ಪರಿಚಯ ಮಾಡಿದ್ದೀವಿ.

ಪ್ರಶ್ನೆ : ನಾಗರೀಕ ಸೌಲಭ್ಯಗಳು ಏನೇನ್ ಸಿಕ್ಕಿದಾವೆ ಸಾರ್ ಜನಕ್ಕೆ?

ಸಚಿವರು : ಆ ರೀತಿ ಕೇಳಿ, 3.7 ಕೋಟಿ ಕೊಟ್ಟು ನೀರು ಸರಬರಾಜಿಗೆ ಪೈಪು ಖರೀದಿ ಮಾಡಿದ್ವಿ. ಪಾರ್ಥೇನಿಯಂ ಕಳೆ ಕೀಳಕ್ಕೆ 63 ಲಕ್ಷ ಖರ್ಚಾಯ್ತು. ಕೊಳವೆ ಬಾವಿಗೆ 2.7 ಕೋಟಿ ರೂಪಾಯಿ ಇಳೆಬಿಟ್ವಿ, ಅದೇ ರೀಪೇರಿಗೇ. 18.75 ಕೋಟಿ ರೂಪಾಯಿಗೆ ರಸ್ತೆ ಮೇಲೆ ಟಾರ್ ಬಿಟ್ಟಿದ್ದೀವಿ... 10.57 ಕೋಟಿಗೆ ಬಡವರಿಗೆ ಅಂತ ವಿದ್ಯುತ್ ಉಪಕರಣ ಖರೀದಿ ಮಾಡಿದ್ವಿ. 6.6 ಕೋಟಿ ಕೊಟ್ಟು ಆಕಾಶಕ್ಕೇ ಹೈ ಮಾಸ್ಕ್ ಲೈಟ್ ಬಿಟ್ವಿ. ಆ ಕಂಬಕ್ಕೊಂದು ಒಂದೂವರೆ ಕೋಟಿ ಕೊಟ್ಟಿದ್ದೀವಿ. ಟೆಂಡರ್ ಕರೆಯಕ್ಕೆ ಪುರುಸೊತ್ತಿರಲಿಲ್ಲ, ಹಾಗಾಗಿ ನಾವೇ ಸೇರಿ ಒಂದೈವತ್ತು ಕೋಟಿಗೆ ಇನ್ನೂ ಏನೇನೋ ಸಾಮಾನು ಸರಂಜಾಮು ಖರೀದಿ ಮಾಡಿದ್ವಿ. ಇನ್ನೂ ಏನೇನೋ ಬಿಡಿ.

ಪ್ರಶ್ನೆ : ಸರಿ ಸಾರ್ ಬಡವರಿಗೆ ಅಂತಾ ಏನ್ ಮಾಡಿದ್ರಿ?

ಸಚಿವರು : ಬಡವ್ರ ಕಣ್ರೀ ನಮಗಾದಾರ. ಬಡವರ ಮನೆಗೆ ಸಿಮೆಂಟ್ ಶೀಟ್ ಹೊದ್ಸಕ್ಕೆ ಅಂತ ಹದಿಮೂರುವರೆ ಕೋಟಿ ರೂಪಾಯಿ ಖರ್ಚು ಮಾಡಿವಿ. ಬಡವರ ಹೆಣ್ಮಕ್ಕಳಿಗೆ ಹೊಲಿಗೆ ಯಂತ್ರಕ್ಕೆ ಅಂತ 63 ಲಕ್ಷ ಖರ್ಚಾಯ್ತು. ಪಾಪಾ.. ತಳ್ಳಗಾಡಿಯವರಿಗೆ ಒಂದೆಪ್ಪತ್ತೇಳು ಲಕ್ಷ ಕೊಟ್ಟಿದ್ದೀವಿ.

ಪ್ರಶ್ನೆ : ಸರಿ ಬಿಡಿ ಸಾರ್; ಮತ್ತೆ ಈ ಲೋಕೋಪಕಾರದ ಕೆಲಸ ಏನಾಗಿದೆ ಸಾರ್ ನಿಮ್ ಅಧಿಕಾರದ ಅವ್ದೀಲಿ?

ಸಚಿವರು : ಆಯ್ಯೋ- ರಸ್ತೆ ಬೀದಿಗಳಿಗೆ, ಹೆಸರು ಬರೆಸೋ ಕಂಬಗಳಿಗೇ ಒಂದೂವರೆ ಕೋಟಿ ಖರ್ಚು ಮಾಡಿದ್ದೀವಿ ಅಂದ್ರೆ ಉಳಿದಿದ್ದನ್ನು ನೀವೇ ಇಮ್ಯಾಜಿನ್ ಮಾಡ್ಕಳಿ.

ಪ್ರಶ್ನೆ : ಸಾರ್ ಇವೆಲ್ಲಾ ನಿಜವಾಗ್ಲು ಸೇರಬೇಕಾದೋರ್ಗೆ ಸೇರಿದಾವಾ ಸಾರ್?

ಸಚಿವರು : ಖಂಡಿತ ಕಣ್ರೀ ಅನುಮಾನಾನ. ಬೇಕಾದ್ರೆ ಆ ಲೋಕಾಯುಕ್ತ ಅವ್ರಲ್ಲ, ವೆಂಕಟಾ ಚಲಯ್ಯ ಅಂತ ಅವರತ್ರನೆ ಕೇಳಿ ತಿಳ್ಕಳಿ. ಅವರೇ ಹೇಳ್ತರೆ ಯಾರ್‍ಯಾರಿಗೆ ಎಷ್ಟೆಷ್ಟು ಸಿಕ್ಕದೆ ಅಂತಾ..

ಪ್ರಶ್ನೆ : ಆಯ್ತು ಸಾರ್, ಈ ಕಡು ಬಡವರ ಸಲುವಾಗಿ ಏನು ಮಾಡಿದ್ದೀರಿ ಸಾರ್.

ಸಚಿವರು: ನೋಡಿ ಪಾಪ ಕಡು ಬಡವ ಅಂತಾ ಆ ಮಾಜಿ ಆಯುಕ್ತ ರಾಮ್‌ಸ್ವಾಮಿ ಒಬ್ಬಿಗೆ 15 ಕೋಟಿ ರೂಪಾಯಿ ನಮ್ ಆದಾಯ್ದಲ್ಲಿ ಬಿಟ್‌ಕೊಟ್ಟಿದ್ದೀವಿ. ಎಲ್ಲಾ ಪೇಪರ್ನಲ್ಲೂ ಬಂದಿದ್ದು. ನಿಮ್ಗೇನ್ ಗೊತ್ತಿಲ್ವಾ?

ಪಾಪ, ನಮ್ಮ ಕೌನ್ಸಿಲರ್ಗೊಳು ಚುನಾವಣೆಗೆ ನಿಂತಾಗ ಬಡವ್ರೆ ಆಗಿದ್ರು. ಈಗ ನೀವೇ ಬೇಕಾದ್ರ ನೋಡಿ... ಸಾಮಾನ್ಯವಾಗಿ ಓಡಾಟಕ್ಕೆ ಕಾರು, ವಾಸಕ್ಕೆ ಒಳ್ಳೆ ಮನೆ, ಕೈಗೆ ಬ್ರಾಸ್‌ಲೈಟು, ಜೇಬಲ್ಲಿಟ್ಕಳಕ್ಕೆ ಮೊಬೈಲು, ಕುತ್ತಿಗೆಗೆ ಚಿನ್ನದ ಚೈನು ಎಲ್ಲಾ ಮಾಡ್ಕೊಟ್ಟಿದ್ದೀವಿ. ಈ ಸಲ ಗೆದ್ರೆ ಇನ್ನೂ ಬೇಕಾದಂಗೆ ಮಾಡ್ಕೊಡ್ತಿವಿ.

ಪ್ರಶ್ನೆ : ಸರಿ ಸಾರ್, ಇಷ್ಟೆಲ್ಲಾ ಸಾಧನೇನ ನೀವೇ ಮಾಡಿದ್ರಾ ಇಲ್ಲಾ ಬೇರೆ ಪಾರ್ಟಿಗಳ ಸಹಾಯನೂ ತಗಂಡ್ರ.

ಸಚಿವರು : ನೋಡ್ರಿ ನಮ್ ಯೋಜನೆ, ಸಾಧನೆಗೆ ಬೆರಗಾಗಿ 6 ಜನ ಕೌನ್ಸಿಲರ್‌ಗಳು ಪ್ರಾರಂಭಕ್ಕೇನೆ ಅವರ ಪಾರ್ಟಿ ಬಿಟ್ಟು ನಮ್ ಪಾರ್ಟಿಗೆ ಬಂದ್ರು, ಅಂದ್ರೆ ಅವರೂ ಕೂಡ ನಮ್ ಸಾಧನೆಗಳ ಭಾಗ ತಾನೆ? ಅಷ್ಟಾದ ಮೇಲೆ ಆ ಕಮಲ್ದೋರು, ಉಳಿದೋರು ನಮ್ ಜತ್ಗೆ ಅವರಷ್ಟಕ್ಕೆ ಅವರೆ ಒಡಂಬಡಿಕೆ ಮಾಡ್ಕಂಡ್ರು. ಯಾರೇನು ಕಮ್ಮಿ ಇಲ್ಲ, ಯಾರೇನು ಜಾಸ್ತಿ ಇಲ್ಲ. ಸಮನಾಗೆ ಕೈ ಜೋಡ್ಸಿ ಎಲ್ಲರೂ ಬಾಯ್ಮುಚ್ಕೊಳೋ ಸಾಧನೆ ಮಾಡಿವಿ. ಜಗತ್ತಿಗೆ ತೋರ್ಸಿವಿ.

ಪ್ರಶ್ನೆ : ನಿಮ್ ಸಾಧನೆಗಳಿಗೆ ಯಾರು ಅಡ್ಡಗಾಲು ಹಾಕ್ಲಿಲ್ವಾ ಸಾರ್.


ಸಚಿವರು : ಇಲ್ಲಾ ಬಿಡ್ರಿ. ಎಲ್ಲರ ಸಹಾಯ, ಸಹಕಾರದಿಂದ್ಲೆ ಅಂತಾ ಇಷ್ಟೊತ್ತು ಹೇಳೀನಲ್ಲ. ಆ ಕೆಂಬಾವುಟದೋರು ಆಗಾಗ ಬೀದಿಗೆ ಬಂದು ಹೋರಾಡೋರು. ನಾವು ಅದ್ಕನೆ ಅವರನ್ನು ಒಳಗಡೆ ಬಿಡ್ಲೆ ಬಾರ್‍ದು ಅಂತ ಎಲ್ಲರೂ ಒಟ್ಟಾಗಿ ತೀರ್ಮಾನ ಮಾಡ್ಕೊಂಡಿದ್ದೀವಿ. ಅವರು ಬಂದ್ರೆ ಕಷ್ಟ ನೋಡ್ರಿ

ಪ್ರಶ್ನೆ : ಗೆದ್ ಬಂದ್ರ ಏನೇನ್ ಮಾಡ್ತೀರಾ ಸಾರ್?

ಸಚಿವರು : ಈಗ ಮಾಡ್ತಿರವನ್ನೆಲ್ಲಾ ಮುಂದುವರಿಸ್ತೀವಿ ಜೊತೆಗೆ ಇನ್ನೂ ಹತ್ತಾರು ಮೂಲದಿಂದ ದುಡ್ಡು ಬಂದ್ ಬೀಳಂಗೆ ವ್ಯವಸ್ಥೆ ಮಾಡ್ತೀವಿ. ಈ ಸಲ ಒಂದಷ್ಟು ಬಡವ್ರನ್ನ ಸಾವ್‌ಕಾರ್‍ರು ಮಾಡ್ತೀವಿ.

ವಾರ್ಡುಗಳ ಅಭಿವೃದ್ಧಿಯೇ ಸಿಪಿಐ(ಎಂ) ಆದ್ಯತೆ

ವರ್ತೂರು ಪ್ರದೇಶ ಸಮಿತಿಯ ಸಿಪಿಎಂ ಕಾರ್ಯದರ್ಶಿ ಹೆಚ್.ಎನ್.ಗೋಪಾಲಗೌಡರ ಜೊತೆ ಸಂದರ್ಶನ



ಪ್ರಶ್ನೆ: ಈ ಚುನಾವಣೆಯಲ್ಲಿ ನೀವು ಎಷ್ಟು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೀರಿ?

● ಏಳು ವಾರ್ಡುಗಳಲ್ಲಿ ಸ್ಪರ್ಧೆಯಲ್ಲಿದ್ದೇವೆ.

ಪ್ರಶ್ನೆ : ಯಾವ ಹಿನ್ನೆಲೆಯಿಂದಾಗಿ ಏಳು ವಾರ್ಡುಗಳನ್ನು ಆಯ್ಕೆ ಮಾಡಿದ್ದೀರಿ?

● ಹೆಚ್‌ಎನ್‌ಜಿ: 1ನೇ ವಾರ್ಡಿನಲ್ಲಿ ಕಳೆದ ಬಾರಿ ನಮ್ಮ ಅಭ್ಯರ್ಥಿಯಾಗಿ ಗೌರಮ್ಮ ಕಣದಲ್ಲಿದ್ದರು. ಅತ್ಯಲ್ಪ ಮತಗಳಿಂದ ಪರಾಜಿತಗೊಂಡಿದ್ದರು. ಗಣನೀಯ ಮತ ನೀಡಿದ ವಾರ್ಡಿನಲ್ಲಿ ಚಟುವಟಿಕೆ ಮುಂದುವರೆಸಿದ್ದರು. ಮತ್ತೆ ಅಲ್ಲಿ ಸ್ಪರ್ಧಿಸಲಾಗಿದೆ.

ಇನ್ನು 7 ಮತ್ತು 11 ನೇ ವಾರ್ಡುಗಳಲ್ಲಿ ಆಟೋ ಚಾಲಕರು ಸಂಘಟಿತರಾಗಿ, ಜನರ ಮೂಲಭೂತ ಸೌಕರ್ಯಗಳಿಗಾಗಿ ಹೋರಾಟ, ಚಟುವಟಿಕೆಗಳನ್ನು ನಡೆಸಿದ್ದಾರೆ. ಜನರ ನಡುವೆ ಕ್ರಿಯಾಶೀಲರಾಗಿದ್ದಾರೆ. ಅಲ್ಲಿ ಇಬ್ಬರು ಆಟೋ ಚಾಲಕರು ಪ್ರಭಾಕರ್ ಮತ್ತು ಕೆ.ಜಿ.ಜಗನ್ನಾಥ್ ಅಭ್ಯರ್ಥಿಗಳಾಗಿದ್ದಾರೆ.

ಹಾಗೆಯೇ ವಾರ್ಡ್ ನಂ. 29 ರಲ್ಲಿ ಕಳೆದ ಹತ್ತಾರು ವರ್ಷಗಳಿಂದ ಚಟುವಟಿಕೆಗಳು, ಹೋರಾಟಗಳ ಮೂಲಕ ಕ್ರಿಯಾಶೀಲರಾಗಿದ್ದೇವೆ. ಇದೇ ವಾರ್ಡಿನ ನಿವಾಸಿ ಸಿಐಟಿಯು ಮುಖಂಡ ಜಯರಾಂ ಇಲ್ಲಿ ಸ್ಪರ್ಧಿಸಿರುತ್ತಾರೆ. ಇನ್ನುಳಿದಂತೆ 30, 31, 32 ವಾರ್ಡುಗಳಿರುವ ವಿಜಿನಾಪುರ ಸ್ಲಂ ಪ್ರದೇಶಕ್ಕೆ 4 ವರ್ಷಗಳ ನಿರಂತರ ಹೋರಾಟದ ಹಿನ್ನೆಲೆಯಿದೆ. 20 ಎಕರೆ ವ್ಯಾಪ್ತಿಯ ಸ್ಲಂ ಪ್ರದೇಶವನ್ನು ಹೋರಾಟದ ಮೂಲಕ ಡಿಕ್ಲೇರ್ ಮಾಡಿಸಿದ್ದೇವೆ. ಒಂದೂವರೆ ಸಾವಿರ ಕುಟುಂಬಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟಿವೆ. ನಾಗರಿಕ ಸೌಲಭ್ಯಗಳಿಗೆ ಕೆಲಸ ನಡೆಯುತ್ತಿದೆ. ಅಲ್ಲಿ ಶಿವಕುಮಾರ್, ರವಿಚಂದ್ರನ್, ಮಲ್ಲಿಕಾ ನಮ್ಮ ಅಭ್ಯರ್ಥಿಗಳಾಗಿದ್ದಾರೆ.

ಪ್ರಶ್ನೆ : ಚುನಾವಣೆಯಲ್ಲಿ ನಿಮ್ಮ ಪಕ್ಷಕ್ಕೆ ಸಹಾಯಕವಾಗಬಲ್ಲ ಅಂಶಗಳು ಯಾವುವು?

● ನೋಡಿ, ನಮ್ಮದು ಹೋರಾಟದ ಪಕ್ಷ. ಕಾರ್ಮಿಕರು ಜನಸಾಮಾನ್ಯರ ಸಮಸ್ಯೆಗಳ ವಿರುದ್ಧ ಕಳೆದ ಮೂವತ್ತು ವರ್ಷಗಳಿಂದ ನಾವಿಲ್ಲಿ ಚಟುವಟಿಕೆ ನಡೆಸುತ್ತಾ ಬಂದಿದ್ದೇವೆ. ಹಲವಾರು ಹೋರಾಟಗಳನ್ನು ಸಂಘಟಿಸಿದ್ದೇವೆ. ಈಗಲೂ ಆ ಚರಿತ್ರೆಯನ್ನು ಕಾಪಾಡಿಕೊಂಡಿದ್ದೇವೆ.

ಇತ್ತೀಚಿನ ಕೆಲವು ಉದಾಹರಣೆಗಳನ್ನು ನೀಡುವುದಾದರೆ ತೂಗು ಸೇತುವೆಯ ಜಾಗದಲ್ಲಿದ್ದ ಕಿರಿದಾದ ಸೇತುವೆಯಿಂದಾಗಿ ವಿಪರೀತ ಅಪಘಾತಗಳು ಸಂಭವಿಸುತ್ತಿದ್ದವು. ಸೇತುವೆ ಪುನರ್ನಿರ್ಮಾಣಕ್ಕೆ ಹತ್ತಾರು ಚಳುವಳಿಗಳನ್ನು ನಡೆಸಿದ್ದೇವೆ. ಉದಯನಗರ ಬಂದ್ ಮಾಡಿದ್ದೇವೆ. ನಂತರ ಕಾಮಗಾರಿ ಪ್ರಾರಂಭವಾದುದನ್ನು ನೆನಪಿಸಬಯಸುತ್ತೇವೆ.

ಕಾಮಗಾರಿ ಹಂತದಲ್ಲಿ ಧೂಳೆದ್ದು ಹಳ್ಳಮಯವಾಗಿದ್ದ ರಸ್ತೆಗೆ ಜಲ್ಲಿ, ಡಾಂಬರು ಹಾಕಿಸಿದ್ದೇವೆ. ಹೋರಾಟದ ಮೂಲಕ ಇದು ಸಾಧ್ಯವಾಗಿದೆ.

ಸೇತುವೆ ನಿರ್ಮಾಣದ ನಂತರ ದ್ವಿಚಕ್ರ ವಾಹನಗಳ ಸುಗಮ ಸಂಚಾರಕ್ಕೆ ಲೆವೆಲ್ ಕ್ರಾಸಿಂಗ್ ತೆರವುಗೊಳಿಸಲು ಯಶಸ್ವಿಯಾದ ರೈಲು ತಡೆ ನಡೆಸಿದ್ದೇವೆ. ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಅಧಿಕಾರಿಗಳ ಜೊತೆ ಮಾತುಕತೆ ಮಾಡಿದ್ದೇವೆ. ತೆರವುಗೊಳಿಸುವ ತನಕ ಹೋರಾಟ ಮುಂದುವರೆಸುತ್ತೇವೆ.

ಪ್ರಶ್ನೆ: ನಗರಸಭೆ ವ್ಯಾಪ್ತಿಯಲ್ಲಿ ವಿಪರೀತವಾದ ಅಭಿವೃದ್ಧಿ ಕುಲ್ಲುಗಳನ್ನು

ಪುಟ 2 ಕ್ಕೆ

ಭ್ರಷ್ಟರು ಮತ್ತೊಮ್ಮೆ ಮನೆ ಬಾಗಿಲಲ್ಲಿ !

ನೂರು ಕೋಟಿ ರೂಪಾಯಿಗಳ ಬ್ರಹ್ಮಾಂಡ ಭ್ರಷ್ಟಾಚಾರದ ಮೂಲಕ ಕೃಷ್ಣರಾಜಪುರ ನಗರಸಭೆಯನ್ನು ಜಗದ್ವಿಖ್ಯಾತಗೊಳಿಸಿದ ಕಾಂಗ್ರೆಸ್ ಈ ಬಾರಿಯೂ ಜನತೆಗೆ. ಟೋಪಿ ತೊಡಿಸಲು ಸಜ್ಜಾಗಿದೆ. ಭಾರೀ ಆರ್ಭಟದ ಪ್ರಚಾರವನ್ನು ಆರಂಭಿಸಿದೆ. ಸಚಿವ ಎ.ಕೃಷ್ಣಪ್ಪನವರ ವರ್ಣಮಯ ವ್ಯಕ್ತಿತ್ವವನ್ನು ಬಿಂಬಿಸುವ ಹೊಸ ಪತ್ರಿಕೆಗಳನ್ನು ಮತದಾರರ ಮಧ್ಯೆ ಹರಿಯಬಿಟ್ಟು ಸಚಿವರಿಗೆ, ಸಚಿವರ ಪಕ್ಷಕ್ಕೆ ಹೊಸ ಇಮೇಜ್ ಸೃಷ್ಟಿಸುವ ಹೊಸ ಹೊಸ ತಂತ್ರಗಳು ಚಲಾವಣೆಯಲ್ಲಿವೆ. ನಗರಸಭಾ ವ್ಯಾಪ್ತಿಯಲ್ಲಿನ ರಸ್ತೆಗಳ ಹಳ್ಳ-ಕೊಳ್ಳ ಹೊಂಡಗಳನ್ನು ಮುಚ್ಚಲು ಕನಿಷ್ಟ ಮಣ್ಣಾದರೂ ವ್ಯವಸ್ಥೆ ಮಾಡದೇ ಹೋದ ಕಾಂಗ್ರೆಸ್ ಪಕ್ಷ ಕೋಟಿಗಟ್ಟಲೆ ಹಣವನ್ನು ಚುನಾವಣೆಗಾಗಿ ಚೆಲ್ಲಾಡುತ್ತಿದೆ. ಪ್ರದೇಶದ ಜನತೆಯ ಭವಿಷ್ಯಕ್ಕಿಂತ ಕೃಷ್ಣಪ್ಪನವರ ಭವ್ಯ ರಾಜಕೀಯ ಭವಿಷ್ಯವೇ ಕಾಂಗ್ರೆಸ್ ಪಾಲಿಗೆ ಇದೊಂದು ಪ್ರತಿಷ್ಠಿತ ಚುನಾವಣೆಯಾಗಲು ಕಾರಣವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಗುರಿಯಾಗಿಸಿಕೊಂಡು ಸಿಎಂಸಿ ಯನ್ನು ಭದ್ರ ಪಡಿಸಿಕೊಳ್ಳಲು ಮುಂದಾಗಿರುವ ಕೃಷ್ಣಪ್ಪನವರ ಪಡೆ, ಕ್ಷೇತ್ರದಲ್ಲಿ ಕಣ್ಣಿಗೆ ಕಾಣುವ ಅಂದ-ಚೆಂದದ ಮನೆಗಳನ್ನು ಕಟ್ಟಿಸಿಕೊಟ್ಟವರೂ ನಾವೇ ಎನ್ನುವ ಮಟ್ಟಕ್ಕೆ ಪ್ರಚಾರಕ್ಕಿಳಿದಿದೆ.

ಎಷ್ಟರಮಟ್ಟಿಗೆ ಎಂದರೆ ಏಷ್ಯಾದಲ್ಲೇ ಪ್ರಥಮವೆನಿಸಿರುವ ತೂಗಾಡುತ್ತಿರುವ ಸೇತುವೆ ನಮ್ಮಿಂದಾದದ್ದು ಹಾಗೆ ವಿಶ್ವವಿಖ್ಯಾತ ಐ.ಟಿ.ಪಾರ್ಕ್ ನಾವು ಮಾಡಿದ್ದು, ಬೆನ್ನಿಗಾನಹಳ್ಳಿ, ಬಿ.ನಾರಾಯಣಪುರಗಳ ಸೇತುವೆ ನಾವು ಕಟ್ಟಿದ್ದು, ಉದ್ದುದ್ದ-ಅಗಲಗಲ ರಸ್ತೆಗಳಿಗೆ ನಾವೇ ಮಣ್ಣು ಹೊತ್ತಿದ್ದು, ಟಾರು ಹಾಕಿದ್ದು. ಇನ್ನೇನು ಕಾವೇರಿ ಯನ್ನು ಕೃಷ್ಣರಾಜ ಪುರಕ್ಕೆ ಹರಿಸಬೇಕೆನ್ನುವಷ್ಟರಲ್ಲಿ ಈ ಚುನಾವಣೆ ಅಡ್ಡ ಬಂತು. ಈಗಲೂ ಕಾಲ ಮಿಂಚಿಲ್ಲ. ನಮ್ಮನ್ನು ಗೆಲ್ಲಿಸಿ ನೋಡಿ 10 ಕ್ಕೆ ಚುನಾವಣೆ ಮುಗಿಯುತ್ತಿದ್ದಂತೆ 11 ಕ್ಕೆ ಕಾವೇರಿಯನ್ನು ನಿಮ್ಮ ಮನೆ ಬಾಗಿಲಲ್ಲಿ ನಿಲ್ಲಿಸುತ್ತೇವೆ. ಬಾಕಿ ಉಳಿದ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸುತ್ತೇವೆ ಮುಂತಾಗಿ ಕಾಂಗ್ರೆಸ್ ಎಗ್ಗಿಲ್ಲದ ಪ್ರಚಾರ ನಡೆಸಿದೆ.

3 ಲಕ್ಷ ರೂಪಾಯಿ ಬೆಲೆ ಬಾಳುವ ಹೈ ಮಾಸ್ಕ್ ಲೈಟ್‌ಗಳನ್ನು 9 ಲಕ್ಷಕ್ಕೆ ಖರೀದಿಸಿದ ಲೆಕ್ಕ ತೋರಿಸಿದ್ದು, 3000 ರೂಪಾಯಿಗಳ ಮೌಲ್ಯದ ಸೋಡಿಯಂ ಲೈಟ್‌ಗಳಿಗೆ 6000 ಬಿಲ್ ತೋರಿಸಿದ್ದು, 2,100 ರೂಪಾಯಿಗಳ ಟೈಲರಿಂಗ್ ಮೆಷಿನ್‌ಗಳನ್ನು 4,500 ರೂಪಾಯಿಯೆಂದು ಮರೆ ಮಾಚಿದ್ದು, ಇಲ್ಲದ ರಸ್ತೆಗಳಿಗೆ ಡಾಂಬರು ಹಾಕಿಸಿದ್ದು. ಫೈಲುಗಳಲ್ಲೆ ಹೊಸ-ಹೊಸ ರಸ್ತೆಗಳನ್ನು ನಿರ್ಮಿಸಿದ್ದು, ಚರಂಡಿ, ಮೋರಿಗಳ ಕಸ ತೆಗೆಸಲೆಂದು ಸುಳ್ಳು ಲೆಕ್ಕ ಬರೆದದ್ದು, ಇಷ್ಟೆಲ್ಲಾ ಅವ್ಯಹಾರದ ಒಟ್ಟು ಮೊತ್ತ 100 ಕೋಟಿ ಆದದ್ದು. ಲೋಕಾಯುಕ್ತರು ಅವ್ಯವಹಾರವನ್ನು ಬೀದಿಗೆ ತಂದಿದ್ದು ಈ ಪಟ್ಟಿಯನ್ನು ಕಾಂಗ್ರೆಸ್ ಮರೆಮಾಚಿದ್ದು ಜನ ಮರೆಯಬೇಕಲ್ಲ!

ಮುಖ್ಯ ರಸ್ತೆಗಳು ಟಾರು ಕಂಡಿರಬಹುದು. ಸಾಮಾನ್ಯ ಜನರ ಜೇಬು ಕಸಿದು ಕೇಂದ್ರ ಸರ್ಕಾರ ಸೇತುವೆಯನ್ನು ತೂಗುಬಿಟ್ಟಿರಬಹುದು. ವಿದೇಶಿ ಬಂಡವಾಳಿಗರನ್ನು ಆಕರ್ಷಿಸಿ ಕಮಿಷನ್ ಹೊಡೆಯಲು ಹೈಟೆಕ್ ಮುಖ್ಯಮಂತ್ರಿ ಐಟಿಪಿಎಲ್ ಪಾರ್ಕ್ ಮಾಡಿರಬಹುದು. ಆದರೆ ಬಹು ಸಂಖ್ಯಾತರ ಬದುಕನ್ನು ಕಾಣಲು ಮುಖ್ಯರಸ್ತೆಗಳಿಂದ ಜನವಾಸಿತ ಪ್ರದೇಶಗಳಿಗೆ ಪ್ರವೇಶಿಸಬೇಕು.

ನಾಲ್ಕು-ಐದು ದಿನಕ್ಕೊಮ್ಮೆ ಕಾಣಿಸಿಕೊಳ್ಳುವ ಕುಡಿಯುವ ನೀರು. ಮಣ್ಣು-ಕಸ-ಕಡ್ಡಿ ಪಾಯಖಾನೆಗಳಿಂದ ತುಂಬಿ ಹೋಗಿರುವ ಅವ್ಯಸ್ಥಿತ ಮೋರಿಗಳು, ಆಳುದ್ದ ಗುಂಡಿ ಬಿದ್ದು ಧೂಳಿದ್ದಿರುವ ರಸ್ತೆಗಳು, ಲೈಟುಗಳೇ ಇಲ್ಲದ ವಿದ್ಯುತ್ ಕಂಬಗಳು, ಮನುಷ್ಯನ ಘನತೆಗೆ ಕನಿಷ್ಟ ಅವಶ್ಯಕತೆಗಳೂ ಇಲ್ಲದ ಹತ್ತಾರು ಸ್ಲಮ್ಮುಗಳ ದಿವ್ಯ ದರುಶನವಾಗುತ್ತದೆ, ಒಳ ಹೊಕ್ಕಾಗ.

ಮುಗ್ಧ ಮಹಿಳೆಯರು ಕೇಳುತ್ತಿದ್ದಾರೆ "ಇವುಗಳನ್ನು ಸರಿಪಡಿಸುವ ಸಲುವಾಗಿ ಬಂದ ಹಣ ತಾನೆ ಅದು ನೂರು ಕೋಟಿ ರೂಪಾಯಿ ಅಂತ'. ಜನಸಾಮಾನ್ಯರ ತೆರಿಗೆಯ ಹಣ, ನೀರು, ಮೋರಿ, ರಸ್ತೆ, ಚರಂಡಿ, ಶೌಚಾಲಯ, ವಿದ್ಯುದ್ದೀಪಗಳ ನಿರ್ಮಾಣಕ್ಕಾಗಿ ಮೀಸಲಿಟ್ಟ ಕೋಟಿಗಟ್ಟಲೆ ಹಣವನ್ನು ನುಂಗಿ ನೀರು ಕುಡಿದ ಧನದಾಹಿ ಕಾಂಗ್ರೆಸ್ಸಿಗರಿಗೆ ಮತ್ತೆ ಅಧಿಕಾರವನ್ನು ಧಾರೆ ಎರದರೆ ಮುಂದಿನ ದಿನಗಳಲ್ಲಿ ನಗರಸಭೆಯ ಜಾಗವಾದರೂ ಉಳಿದೀತೆ?ಯೋಚನೆ ಮಾಡುವುದು ಮತದಾರರ ಜವಾಬ್ದಾರಿ.

ರಸ್ತೆ-ಮೋರಿ-ಶೌಚಾಲಯಗಳನ್ನೇ ನುಂಗಿದ ಕಾಂಗ್ರೆಸ್ಸಿನ ಅಪಖ್ಯಾತಿಯ ಲಾಭ ಪಡೆಯಲು ಬಿಜೆಪಿ ನುಗ್ಗಿದೆ. ಇವರ ಬಗ್ಗೆ ಈಗಾಗಲೇ ಚೆಡ್ಡಿ ಹುಡುಗರು ಮಾತಾಡಿಕೊಳ್ಳುತ್ತಿದ್ದಾರೆ. ದೇಶ ಹಾಳುಗೆಡವಲು ಕಾಂಗ್ರೆಸ್ಸಿಗೆ ಐವತ್ತು ವರ್ಷವಾದರೆ ಬಿಜೆಪಿಗೆ ಐದೇ ವರ್ಷ ಎಂದು. ಕಾಂಗ್ರೆಸ್ಸಿನ ಎಲ್ಲ ಅನಿಷ್ಟಗಳನ್ನು ಮೈಗೂಡಿಸಿ ಕೊಂಡಿರುವ ಬಿಜೆಪಿಗೆ ಮೇಲಾಗಿ ಇನ್ನೊಂದು ಖಾಯಿಲೆಯೂ ಇದೆ. ಜಾತಿ-ಧರ್ಮ-ಭಾಷೆ ಮುಂತಾದ ಹೆಸರಿನಲ್ಲಿ ಜನರ ತಲೆ ಹೊಡೆಯುವ ಕುಖ್ಯಾತಿ ಕಾಯಿಲೆಯದು.

ಇವರೇನಾದರೂ ಅಧಿಕಾರಕ್ಕೆ ಬಂದರೆ 'ಇದ್ದರೆ ಉಣ್ಣುವುದು ಇಲ್ಲವಾದರೆ ನೀರು ಕುಡಿದು ಮಲಗುವುದು' ಎನ್ನುವ ಪರಿಸ್ಥಿತಿಗೂ ಅವಕಾಶವಿಲ್ಲ. ಯಾವಾಗ ಗಲಾಟೆಯೋ? ಎಲ್ಲಿ ಗಲಾಟೆಯೋ? ಯಾರ ತಲೆ ಯಾರು ಹೊಡೆದ್ರೊ? ಮುಂತಾದ ಆತಂಕದಲ್ಲೇ ಬದುಕಿದ್ದೂ ಸಾಯಬೇಕು. ಹೀಗಾಗಿ ಹಿಂಸೆಗೆ ಕುಖ್ಯಾತವಾಗಿರುವ ಬಿಜೆಪಿಯನ್ನು ಎಲ್ಲಿಡಬೇಕೋ ಅಲ್ಲಿಡುವುದೇ ಸೂಕ್ತ.

ಒಂದೇ ನಾಣ್ಯದ ಎರಡು ಮುಖಗಳಾಗಿರುವ ಕಾಂಗ್ರೆಸ್ - ಬಿಜೆಪಿಗಳಿಗೆ ಪರ್ಯಾಯವಾಗಿ ಸ್ಪರ್ಧೆ ಮಾಡಿರುವ ಜನತಾದಳವು ಸಹ ಈ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಕೆಲಸಗಳನ್ನು ಮಾಡಲಿಲ್ಲ.

ಇವರಿಬ್ಬರ ಆರ್ಥಿಕ ನೀತಿಗಳ ವಿರುದ್ಧವಾಗಿ ಯಾಗಲೀ ಸಿಎಂಸಿ ಭ್ರಷ್ಟಾಚಾರದ ವಿರುದ್ಧವಾಗಲೀ, ಅಭಿವೃದ್ಧಿ ಕಾಮಗಾರಿಗಳಿಗೆ ಆಗ್ರಹಿಸಿಯಾಗಲೀ ಬೀದಿಗಿಳಿದು ಸೆಣಸಾಡಿ ದವರೂ ಅಲ್ಲ. ಕಾರ್ಖಾನೆಗಳು ಮುಚ್ಚಿ ಸಾವಿರಾರು ಕಾರ್ಮಿಕರು ಬೀದಿಪಾಲಾದಾಗ ಕಾರ್ಮಿಕರ ಪರವಾಗಿ ನಿಂತವರೂ ಅಲ್ಲ. ನಿಮ್ಮ ದುರ್ಬಲತೆಯೆ ನಮಗೆ ಲಾಭವೆಂದು ಕಾಂಗ್ರೆಸ್ ಬಿಜೆಪಿಗೆ ಪರ್ಯಾಯವಾಗಿ ಸ್ಪರ್ಧಿಸಿದೆ ಈ ಪಕ್ಷ.

ಸಿಪಿಐ(ಎಂ) ಹತ್ತಾರು ಜನಪರ ಹೋರಾಟಗಳ ಹಿನ್ನೆಲೆಯಲ್ಲಿ ಜನರ ನಡುವೆ ಕೆಲಸ ಮಾಡುವ ಅಭ್ಯರ್ಥಿಗಳನ್ನು ಆರಿಸಿ ಕಣಕ್ಕಿಳಿಸಿದೆ. 35 ವಾರ್ಡುಗಳ ಕೃಷ್ಣರಾಜಪುರ ನಗರಸಭೆ ಪ್ರತಿಷ್ಠಿತ ಕಣವಾಗಿ ಸಜ್ಜಾಗಿದೆ. ಇದೇತಿಂಗಳ 10 ಕ್ಕೆ ನಡೆಯಲಿರುವ ಚುನಾವಣೆಗೆ ಇದೇ ಮೊದಲ ಬಾರಿಗೆ ಸಿಪಿಐ(ಎಂ) ಪಕ್ಷ ಏಳು ವಾರ್ಡುಗಳಲ್ಲಿ ಸ್ಪರ್ಧೆಗಿಳಿದಿದೆ.

ಜನಪರ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ನಗರಸಭೆಯ ಸಭೆಗಳಲ್ಲಿ ನಿರಂತರ ಭಾಗವಹಿಸಿ ಜನಸಾಮಾನ್ಯರ ಸಮಸ್ಯೆಗಳನ್ನು ಬಿಂಬಿಸಲು ಜೊತೆಗೆ ತೀರ್ಮಾನಗಳನ್ನು ಕೈಗೊಳ್ಳಲು ಅಭಿವೃದ್ಧಿ ಕಾರ್ಯಗಳನ್ನು ಪ್ರಾಮಾಣಿಕವಾಗಿ, ಪಾರದರ್ಶಕವಾಗಿ ಜನರಿಗೆ ತಲುಪಿಸಲು ಅವಕಾಶ ಕಲ್ಪಿಸಬೇಕಾಗಿದೆ.

ಪ್ರಶ್ನೋತ್ತರ

ಕೆ.ಆರ್.ಪುರಂನಲ್ಲಿ ಮಂಗಣ್ಣಗಳ ಹಾವಳಿಯಂತೆ ಹೌದೇನಕ್ಕಾ ?

■ ಊಕಣಕ್ಕ, ಹೆಂಗಸ್ರು, ಮಕ್ಕಳು ಕೈಗೆ ಸಿಕ್ಕಿದ್ನ ತಗಂಡವ್ರೆ ಅಂತ ಗೊತ್ತಾಗಿ ಆ ವಾರ್ಡಿನಿಂದ ಈ ವಾರ್ಡಿಗೆ, ಈ ವಾರ್ಡಿನಿಂದ ಆ ವಾರ್ಡಿಗೆ ನೆಗೆದಾಡ್ತಾ ಅವಂತೆ ನುಂಗಣ್ಣಗಳು

ವಾರ್ಡುಗಳ ಅಭಿವೃದ್ಧಿಯೇ ಸಿಪಿಐ(ಎಂ) ಆದ್ಯತೆ

ಹೇರಲಾಗಿತ್ತು. ಆಗ ನಿಮ್ಮ ಪಾತ್ರ ಏನಾಗಿತ್ತು.

● ಒಂದು ಚದರ ಅಡಿಗೆ 110 ರೂಪಾಯಿಗಳ ಅಭಿವೃದ್ಧಿ ಶುಲ್ಕ ವಿಧಿಸಿ ಕಾಂಗ್ರೆಸ್ ಸರ್ಕಾರ ಆದೇಶ ಹೊರಡಿಸಿದಾಗ ಎಲ್ಲಾ ಪಕ್ಷಗಳು ಅದರ ಪರವಾಗಿದ್ದವು. ಜನತಾದಳ ಅಭಿವೃದ್ಧಿ ಶುಲ್ಕ ಕಟ್ಟಬೇಕೆಂದು ತಾಕೀತು ಮಾಡಿತು. ಬಿಜೆಪಿಯ ನಿಲುವು ಇದೇ ಆಗಿತ್ತು. ಇದಕ್ಕೆ ವಿರೋಧವಾಗಿ ನಿಂತ ಏಕೈಕ ಪಕ್ಷ ನಮ್ಮದು ಮಾತ್ರ. ಹೀಗಾಗಿ ನಾವು ಅಭಿವೃದ್ಧಿ ಹೆಸರಿನಲ್ಲಿ ಬಂದ ಈ ಸುಲಿಗೆಯನ್ನು ಹಿಮ್ಮೆಟ್ಟಿಸಲು ಯುವ ಜನ ಸಂಘಟನೆಯ ನೇತೃತ್ವದಲ್ಲಿ ನಿರಂತರ ಹೋರಾಟ ನಡೆಸಿದೆವು.

ಕಾನೂನಿನ ಮೂಲಕ ಒಂದು ಕಡೆ, ಜನರಿಂದ ಹೋರಾಟ ಮತ್ತೊಂದು ಕಡೆ ನಡೆಸುವ ಮೂಲಕ ಇಂದು ಅಭಿವೃದ್ಧಿ ಶುಲ್ಕವನ್ನು ಕಟ್ಟುವಂತಿಲ್ಲವೆಂಬ ಕೋರ್ಟಿನ ತೀರ್ಪನ್ನು ಪಡೆಯಲು ಸಾಧ್ಯವಾಗಿದೆ.

ಪ್ರಶ್ನೆ: ಇದು ದೊಡ್ಡ ಕೈಗಾರಿಕಾ ಪ್ರದೇಶ. ಇಲ್ಲಿ ಕಾರ್ಮಿಕರ ಮತಗಳು ನಿರ್ಣಾಯಕವಾಗಿವೆ. ಅವರ ಸಲುವಾಗಿ ನೀವು ಏನನ್ನು ಮಾಡಿದ್ದೀರಿ?

● ಈಗಾಗಲೇ ತಿಳಿಸಿದಂತೆ ನಮಗೆ ಈ ಪ್ರದೇಶದಲ್ಲಿ ಮೂವತ್ತು ವರ್ಷಗಳ ಹೋರಾಟದ ಇತಿಹಾಸ.ಅವೆಲ್ಲ ಹೇಳುವುದು ಬೇಡ. ಇತ್ತೀಚಿಗೆ ಭರೂಕ ಗ್ಯಾಸಸ್, ಪೆರಿವಾಲ್ ಪ್ಲಾಸ್ಟಿಕ್ಸ್, ಮೆಕ್‌ನಲಿ, ಕೇವಲ್ ರಮಣಿ, ಬಿಪಿಎಲ್ ಕಾರ್ಖಾನೆಗಳ ಸಾವಿರಾರು ಕಾರ್ಮಿಕರಿಗೆ ಕಾನೂನು ಬದ್ಧ ಸೌಲಭ್ಯಗಳನ್ನು ಕಲ್ಪಿಸಿಕೊಡಲು, ನ್ಯಾಯ ದೊರಕಿಸಿಕೊಡಲು ಹಗಲಿರುಳೆನ್ನದೆ ನಿರಂತರ ಹೋರಾಟ ನಡೆಸಿ ಯಶಸ್ವಿಯಾಗಿದ್ದೇವೆ. ಕಾರ್ಮಿಕರ ಪರವಾಗಿ ನಿಂತು ಮಾಲೀಕರ, ಪೊಲೀಸರ, ಗೂಂಡಾಗಳ, ಕಾಂಗ್ರೆಸ್- ಬಿಜೆಪಿ- ಜನತಾದಳ ಪಕ್ಷಗಳ ದಾಳಿ-ದಬ್ಬಾಳಿಕೆಗಳನ್ನು ಎದುರಿಸಿದ್ದೇವೆ. ಕಾರ್ಮಿಕರ ಹಿತ ರಕ್ಷಿಸಿದ್ದೇವೆ. ಕಾರ್ಮಿಕರ ಹಿತ ರಕ್ಷಣೆಗಾಗಿ ಸುಳ್ಳು ಮೊಕದ್ದಮೆಗಳ ಮೇಲೆ ಕೋರ್ಟು, ಕಚೇರಿ, ಸೆರೆವಾಸಗಳಿಗೂ ತಳ್ಳಲ್ಪಟ್ಟಿದ್ದೇವೆ.

ಪ್ರಶ್ನೆ: ಚುನಾವಣೆಗಳ ಸಮಯದಲ್ಲಿ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ಇನ್ನೊಂದು ಮುಖ್ಯ ವಿಭಾಗ ಕಡು ಬಡ ಕುಟುಂಬಗಳು ಹಾಗೂ ಸ್ಲಮ್ಮುಗಳು. ಇವರ ಮತಗಳು ನಿಮಗೆ ದೊರಕುವವೆ?

● ನೋಡಿ, ವಿಜಿನಾಪುರ ಪ್ರದೇಶ 29 ಎಕರೆ ಜಮೀನನ್ನು ಆವರಿಸಿಕೊಂಡಿರುವ ಸ್ಲಂ ಪ್ರದೇಶ. ಇಲ್ಲಿ ವಾಸಿಸುವ ಎಲ್ಲ ಕುಟುಂಬಗಳು ಕಡುಬಡವರವೆ. ಇಲ್ಲಿಂದ ಅವರನ್ನು ಒಕ್ಕಲೆಬ್ಬಿಸಿ ಜಾಗ ಹೊಡೆಯುವ ಸಂಚನ್ನು ಇತರೆ ಪಕ್ಷಗಳು ರೂಪಿಸಿದ್ದವು. ನಾವು ಮಧ್ಯ ಪ್ರವೇಶ ಮಾಡಿ ಯುವಜನ, ಮಹಿಳಾ ಸಂಘಟನೆಗಳ ಮೂಲಕ ಜಾಗೃತಿ ಮೂಡಿಸಿ, ಸಂಘಟನೆ ಬೆಳೆಸಿ ಸತತವಾಗಿ 4 ವರ್ಷ ಚಳುವಳಿ ನಡೆಸಿದ್ದೇವೆ. ಅಂತಿಮವಾಗಿ ಆ ಜಾಗ ಅಲ್ಲಿನ ಬಡ ಕುಟುಂಬಗಳಿಗೆ ಸಿಕ್ಕಿದೆ. ಸ್ಲಂ ಪ್ರದೇಶವೆಂದು ಡಿಕ್ಲೇರ್ ಆಗಿದೆ. ಆ ಪ್ರದೇಶದಲ್ಲಿ ನಮ್ಮವರು ಮೂವರು ಅಭ್ಯರ್ಥಿಗಳಿದ್ದಾರೆ. ಅವರೂಸಹ ಅದೇ ಸ್ಲಮ್ಮಿನ ನಿವಾಸಿಗಳು. ಖಂಡಿತ ಅವರು ಗೆಲ್ಲುತ್ತಾರೆಂಬ ಭರವಸೆ ನಮಗಿದೆ.

ಪ್ರಶ್ನೆ: ಅದು ಸರಿ, ಅಭಿವೃದ್ಧಿ ಸಲುವಾಗಿನ ಹಣ ಲೂಟಿಯಾದಾಗ ನೀವೇನು ಮಾಡಿದಿರಿ?

● ಬಹುಶಃ ನಮ್ಮ ಪಕ್ಷದ ಪ್ರತಿನಿಧಿಗಳು ನಗರಸಭೆಯಲ್ಲಿದ್ದಿದ್ದರೆ, ಅಲ್ಲಿ ನಡೆಯುವ ಎಲ್ಲಾ ವಿವರಗಳನ್ನು ಜನರಿಗೆ ನೀಡುತ್ತಿದ್ದರು. ಭ್ರಷ್ಟಾಚಾರ ತಡೆಯುವ ಸಾಧ್ಯತೆಗಳಿದ್ದವು. ಆದರೆ ಅಂತಹ ಅವಕಾಶ ನಮಗಿರಲಿಲ್ಲ. ಆದರೂ ನಮ್ಮ ಪಕ್ಷ ಆಗಾಗ ಕಾಮಗಾರಿಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ಬಯಲಿಗೆಳೆದು ಪ್ರತಿಭಟನೆಗಳನ್ನು ನಡೆಸುತ್ತಿದ್ದೆವು. ಜನರಿಗೆ ತಿಳಿಸುತ್ತಿದ್ದೆವು.

ಲೋಕಾಯುಕ್ತರು ದಾಳಿ ನಡೆಸಿ ವಿವರಗಳನ್ನು ಬಹಿರಂಗಪಡಿಸಿದ ಮೇಲಂತು ನಾವು ಒಂದುವಾರ ಕಾಲ ಆಟೋ ಪ್ರಚಾರ ನಡೆಸಿ ಜನಜಾಗೃತಿ ಮೂಡಿಸಿದೆವು. ನಂತರ ಸ್ಥಳೀಯವಾಗಿ ಪ್ರತಿಭಟನೆಗಳನ್ನು ನಡೆಸಿ ಛೀಮಾರಿ ಹಾಕಿದೆವು. ಅಂತಿಮವಾಗಿ ಜಿಲ್ಲಾ ಮಟ್ಟದ ರ್‍ಯಾಲಿ ನಡೆಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆವು.

ಆದರೆ ತನಿಖೆ ನಡೆದು ವರದಿ ಬರುವ ಮುಂಚೆಯೇ ಕಾಂಗ್ರೆಸ್ ಆಡಳಿತ ಅಧಿಕಾರಿಗಳನ್ನು ಭಡ್ತಿ ಮೇರೆಗೆ ಪುನರ್‌ನೇಮಕ ಮಾಡಿಕೊಂಡಿತು. ಮಂತ್ರಿ ಕೃಷ್ಣಪ್ಪನವರಿಗೆ ರಕ್ಷಣೆ ನೀಡಿತು.

ಪ್ರಶ್ನೆ: ಒಂದು ಕಡೆ ಅಭಿವೃದ್ಧಿ ಹಣ ನುಂಗುವ ಭೂಪರು ಮತ್ತೊಂದು ಕಡೆ ಬಡವರನ್ನು ಹಿಂಡಿ-ಹೀರುವ ಕೇಂದ್ರ-ರಾಜ್ಯ ಸರ್ಕಾರದ ನೀತಿಗಳು. ಈ ಮಧ್ಯೆ ನಿಮ್ಮ ಜವಾಬ್ದಾರಿ ಏನಾಗಿತ್ತು?

● ಇಂತಹ ಅಪಾಯದ ಕುರಿತು ಜನಜಾಗೃತಿ ಮೂಡಿಸಿ ಜನಚಳುವಳಿ ಕಟ್ಟುವುದೊಂದೇ ಉಪಾಯ. ಇದರ ಭಾಗವಾಗಿ ಮೇ 21 ರಂದು ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ನಮ್ಮ ಪ್ರದೇಶದಲ್ಲಿಯೂ ಯಶಸ್ವಿ ಮಾಡುವ ಮೂಲಕ ಸಾವಿರಾರು ಜನರನ್ನು ನಾವು ಬೀದಿಗಿಳಿಸಿದ್ದೆವು. ಜನವಿರೋಧಿ ನೀತಿಗಳ ವಿರುದ್ಧ ಈ ಪ್ರದೇಶದಲ್ಲಿ ಬಂದ್ ಆಚರಿಸಲಾಯಿತು.

ಪ್ರಶ್ನೆ: ಈ ಬಾರಿ ತಮ್ಮ ಪಕ್ಷದ ಸದಸ್ಯರು ಸಿಎಂಸಿ ಪ್ರವೇಶಿಸುವರೇ?

● ಖಂಡಿತಾ. ಕಾಂಗ್ರೆಸ್, ಜನತಾದಳಗಳ ಆಳ್ವಿಕೆಯನ್ನು ಕಣ್ಣಾರೆ ಕಂಡ ಜನ ರೋಸಿ ಹೋಗಿದ್ದಾರೆ. ಅಭಿವೃದ್ಧಿ ಕೆಲಸಗಳು ಫೈಲುಗಳಲ್ಲಷ್ಟೇ ಉಳಿದಿವೆ. ನಾಗರೀಕ ಸೌಲಭ್ಯಗಳ ಕೊರತೆಯಿಂದಾಗಿ ಜನರಲ್ಲಿ ನಿರಾಶೆ ಮೂಡಿದೆ. ಮೇಲಾಗಿ ಮತದಾರರು ನಮ್ಮ ಹೋರಾಟಗಳನ್ನು, ಚಟುವಟಿಕೆಗಳನ್ನು ನೋಡಿದ್ದಾರೆ. ನಮ್ಮನ್ನು ಬೆಂಬಲಿಸುತ್ತಾರೆ.

ಪ್ರಶ್ನೆ: ನೀವು ಗೆದ್ದಲ್ಲಿ ನಿಮ್ಮ ಆದ್ಯತೆಯೇನು?

● ವಾರ್ಡುಗಳ ಅಭಿವೃದ್ಧಿ, ರಸ್ತೆ- ಮೋರಿಗಳನ್ನು ವ್ಯವಸ್ಥಿತಗೊಳಿಸುವುದು. ಕುಡಿಯುವ ನೀರಿಗೆ ವ್ಯವಸ್ಥೆ ಮಾಡುವುದು. ಶುಚಿತ್ವಕ್ಕೆ ಗಮನ ನೀಡುವುದು. ಹಿಂದುಳಿದ ಪ್ರದೇಶ ಹಾಗೂ ಸ್ಲಮ್ಮುಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು. ಭ್ರಷ್ಟಾಚಾರವಿಲ್ಲದೆ ಕಾಮಗಾರಿಗಳನ್ನು ಜಾರಿಗೊಳಿಸುವುದು. ನಗರಸಭೆಯ ಆಳ್ವಿಕೆ, ತೀರ್ಮಾನಗಳನ್ನು ಜನರ ಮುಂದಿಡುವುದು. ಒಟ್ಟಾರೆ ಜನಪರವಾದಂತಹ ಕೆಲಸಗಳಿಗೆ ತೊಡಗುವುದು. ಆಡಳಿತ ಪಾರದರ್ಶಕವಾಗಿರುವಂತೆ ಒಳಗೂ-ಹೊರಗೂ ಹೋರಾಡುವುದು ಮತ್ತು ಈ ಪ್ರದೇಶದ ಕೋಮುಸೌಹಾರ್ದತೆಯನ್ನು ಕಾಪಾಡುವುದು ನಮ್ಮ ಆದ್ಯತೆಯಾಗಿದೆ.

ಕಮ್ಯುನಿಸ್ಟ್ ಅಭ್ಯರ್ಥಿಗಳ ಹಿನ್ನೆಲೆಯಾಗಿ ಉದಾಹರಣೆಗೆ ಗೌರಮ್ಮ ಮತ್ತು ಜಯರಾಂರವರನ್ನು ನೋಡಿ ಅವರ ಮನವಿಯನ್ನು ಕೇಳಿ...

ವ 15 ವರ್ಷಗಳಿಂದ ಈ ಪ್ರದೇಶದ ಕಾರ್ಮಿಕರು, ಮಹಿಳೆಯರು ಮತ್ತು ಜನಸಾಮಾನ್ಯರ ಳನ್ನು ಕೈಗೆತ್ತಿಕೊಂಡು ಕೆಲಸ ಮಾಡುತ್ತಿದ್ದೇನೆ.

ಲ ಭಾರತ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಹಕಾರ್ಯದರ್ಶಿ ಹಾಗೂ ತಾಲ್ಲೂಕಿನ ಅಧ್ಯಕ್ಷೆಯಾಗಿರುವ ನಾನು ವಿಶೇಷವಾಗಿ ಮಹಿಳೆಯರ ಹಕ್ಕುಗಳಿಗಾಗಿ ಹಲವಾರು ಕಿಕ ಹೋರಾಟಗಳನ್ನು ಸಂಘಟಿಸಿರುತ್ತೇನೆ.

ದಕ್ಷಿಣೆ, ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸಲು ನೆರವಾಗಿದ್ದೇನೆ. ವಿಧವಾ ವೇತನ, ವೇತನ, ರೇಷನ್ ಕಾರ್ಡುಗಳನ್ನು ಫಲಾನುಭವಿ ಡಿಸಿ ಕೊಟ್ಟಿದ್ದೇನೆ.



ವೃದ್ಧಿ ಕಾಮಗಾರಿಗಳ ಸಲುವಾಗಿ ಒತ್ತಾಯಿಸಿ ನಡೆದ ು ಹೋರಾಟಗಳಲ್ಲಿ ಮಹಿಳೆಯರನ್ನು ಸಂಘಟಿಸಿ ಡಿದ್ದೇನೆ. ಸಾಕ್ಷರತಾ ಆಂದೋಲನದಲ್ಲಿ ಭಾಗವಹಿಸಿ ರಡು ವರ್ಷಗಳ ಕಾಲ ದಲಿತರು, ಹಿಂದುಳಿದವರು, ವರ ನಡುವೆ ಅಕ್ಷರ ಕಲಿಸುವ ಕೆಲಸ ಮಾಡಿದ್ದೇನೆ. ರಾರು ಜನ ವಾಸ ಮಾಡುವ ವಿಜಿನಾಪುರ ಸ್ಲಂ ಕ್ಕು ಪತ್ರ ಕೊಡಿಸಲು, ಸ್ಲಂ ಡಿಕ್ಲೇರ್ ಮಾಡಿಸಲು ಅಲ್ಲಿನ ನ್ನು ಒಗ್ಗೂಡಿಸಿಕೊಂಡು ಸತತ ನಾಲ್ಕು ವರ್ಷ ಹೋರಾಟ ನಡೆಸಿ ಯಶಸ್ವಿಯಾಗಿದ್ದೇವೆ. ಹಕ್ಕುಗಳಿಗಾಗಿ ದಾಳಿ-ದಬ್ಬಾಳಿಕೆಗಳನ್ನು ಎದುರಿಸಿದ್ದೇನೆ.

ಜಯಂತಿ ಷಹರಿ ರೋಜ್ಗಾರ್ ಯೋಜನೆಯ ಅಧ್ಯಕ್ಷೆಯಾಗಿ ಸಿಎಂಸಿ ವ್ಯಾಪ್ತಿಯಲ್ಲಿ ಾಡಿ ಕೇಂದ್ರಗಳು, ಪ್ರಾಥಮಿಕ ಶಾಲೆ, ಶೌಚಾಲಯ, ಸಮುದಾಯ ಭವನ ವುಗಳನ್ನು ಆರ್ಥಿಕವಾಗಿ ಹಿಂದುಳಿದ ಜನರಿಗಾಗಿ ಯೋಜನೆಯ ಮೂಲಕ ತಲುಪಿಸಿದ್ದೇನೆ. ರವಿಲ್ಲದೆ ಕಾಮಗಾರಿಗಳು ನಡೆಯುವಂತೆ ಎಚ್ಚರ ವಹಿಸಿದ್ದೇನೆ.

ಳಗಾದರೆ ಜನಸಾಮಾನ್ಯರ ನಡುವೆ ಅವರ ಸಮಸ್ಯೆಗಳನ್ನು ಹೋಗಲಾಡಿಸಲು ಕೆಲಸ ದರೊಂದಿಗೆ ಜನವಾದಿ ಮಹಿಳಾ ಸಂಘಟನೆಯ ಮೂಲಕ ದೇಶದೆಲ್ಲ ಜನತೆ ತ್ತಿರುವ ಸಮಸ್ಯೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಜನತೆಯ ದುಡಿಯಲು ನಿಶ್ಚಯಿಸಿದ್ದೇನೆ.

ೇರಿ ನೀರಿನ ಯೋಜನೆಯ ಅನುಷ್ಠಾನಕ್ಕೆ ಒತ್ತಾಯಿಸಿ, ಸರ್ಕಾರಿ ಆಸ್ಪತ್ರೆಯಲ್ಲಿನ ನ್ನು ಸರಿಪಡಿಸಲು ನಡೆಯುತ್ತಿರುವ ಹೋರಾಟದಲ್ಲಿ ತೊಡಗಿಸಿಕೊಂಡಿದ್ದೇನೆ. ಪೂರ್ವ ಜನಜಾಗೃತಿ ವೇದಿಕೆಯ ಮುಖ್ಯ ಸಂಘಟನಾ ಕಾರ್ಯದರ್ಶಿಯಾಗಿಯೂ ಕೆಲಸ ದ್ದೇನೆ.


ಜನಿಕರ ಮಧ್ಯೆ ನಿರಂತರ ಪ್ರಗತಿಪರ ಚಟುವಟಿಕೆಯಲ್ಲಿರುವ ನಾನು ಕೆ.ಆರ್.ಪುರ ಚುನಾವಣೆಗೆ ದುಡಿಯುವ ಜನರ ನೇತಾರ ಪಕ್ಷ ಸಿಪಿಐ(ಎಂ) ವತಿಯಿಂದ ತ್ತೇನೆ.

ಅಮೂಲ್ಯವಾದ ಮತಗಳನ್ನು ನನಗೆ ನೀಡುವ ಮೂಲಕ ನಗರಸಭೆಯಲ್ಲಿ ಸಕ್ರಿಯವಾಗಿ ಲು, ಜನಸಾಮಾನ್ಯರ ಸಮಸ್ಯೆಗಳನ್ನು ಚರ್ಚಿಸಲು, ಉತ್ತಮ ತೀರ್ಮಾನಗಳನ್ನು ಅವಕಾಶ ಕಲ್ಪಿಸಿಕೊಡಬೇಕಾಗಿ ಕೋರಿಕೊಳ್ಳುತ್ತೇನೆ. ಪ್ರಾಮಾಣಿಕತೆಯಿಂದ ಕವಾಗಿ ಅಭಿವೃದ್ಧಿ ಕೆಲಸಗಳನ್ನು ಜನರಿಗೆ ತಲುಪಿಸಲು **ಕುಡುಗೋಲು ಸುತ್ತಿಗೆ ನಕ್ಷತ್ರದ** ುತ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಬಂಧುಗಳೇ,

ಜಯರಾಂ ಆದ ನಾನು ಕಾರ್ಖಾನೆಯೊಂದರ ಕಾರ್ಮಿಕನಾಗಿದ್ದು ಕಳೆದ ಹತ್ತಾರು ದ ಈ ವಾರ್ಡಿನ ನಿವಾಸಿಯಾಗಿರುತ್ತೇನೆ.

ಯು ಕಾರ್ಮಿಕ ಸಂಘಟನೆಯ ವರ್ತೂರು ಪ್ರದೇಶ ಸಮಿತಿಯ ಅಧ್ಯಕ್ಷನಾಗಿರುತ್ತೇನೆ. ದ ಕಾರ್ಮಿಕರ ಕಾನೂನು ಬದ್ಧ ಹಕ್ಕುಗಳಿಗಾಗಿ ನಡೆದಿರುವ ಹಲವಾರು ಹೋರಾಟಗಳಲ್ಲಿ ಿಸಿ ಪಾಲ್ಗೊಂಡಿದ್ದೇನೆ. ಮಾಲೀಕರು ಪೊಲೀಸರು ಎಸಗಿದ ಅಕ್ರಮ ದೌರ್ಜನ್ಯಗಳ ರ್ಮಿಕರ ಬೆಂಬಲವಾಗಿ ನಿಂತು ಹಗಲಿರುಳೆನ್ನದೆ ಚಳುವಳಿಗಳಲ್ಲಿ ಪಾಲ್ಗೊಂಡಿದ್ದೇನೆ.



ು ಸೇತುವೆಗಾಗಿ ಒತ್ತಾಯಿಸಿ ಸ್ಥಳೀಯ ನಾಗರಿಕರನ್ನು ಕೊಂಡು ಹತ್ತಾರು ಬಾರಿ ರಸ್ತೆ ತಡೆ, ಧರಣ, ಪ್ರತಿ ್ನ ಸಂಘಟಿಸಿದ್ದೇನೆ. ಸೇತುವೆ ನಿರ್ಮಾಣದ ಹಂತದಲ್ಲಿ ಳ್ಯಗಳಿಂದ ಕೂಡಿ ಧೂಳುಮಯವಾಗಿದ್ದ ರಸ್ತೆಗೆ ಾಕಿಸುವ ಸಲುವಾಗಿ ಇತರೆ ಸಂಘಟನೆಗಳನ್ನು, ನ್ನು ಎಚ್ಚರಿಸಿ ಈ ಪ್ರದೇಶವನ್ನು ಬಂದ್ ಮಾಡಿಸಿ ಹಾಕಿಸುವಲ್ಲಿ ಯಶಸ್ವಿಯಾಗಿದ್ದೇವೆ. ಸೇತುವೆ ನಂತರ ಲೆವೆಲ್ ಕ್ರಾಸಿಂಗ್ ತೆರವುಗೊಳಿಸಲು ು ತಡೆ ಚಳುವಳಿ ನಡೆಸಲಾಗಿದೆ.

ವ್ಯಾಪ್ತಿಯಲ್ಲಿ ವಿಧಿಸಲಾಗಿದ್ದ ವಿಪರೀತ ಅಭಿವೃದ್ಧಿ ಶುಲ್ಕಗಳ ವಿರುದ್ಧ ಈ ಪ್ರದೇಶದಲ್ಲಿ ರ ನಡೆಸಿ ಜನತೆಯನ್ನು ಜಾಗರೂಕಗೊಳಿಸಿ ಹತ್ತಾರು ಹೋರಾಟಗಳನ್ನು ನಡೆಸಲಾಗಿದೆ. ಟದಲ್ಲಿ ನಾನು ಮುಂಚೂಣಿಯಲ್ಲಿದ್ದು ಕಾರ್ಯ ನಿರ್ವಹಿಸಿರುತ್ತೇನೆ.

ಪುರಂ ಪ್ರದೇಶ ವ್ಯಾಪ್ತಿಯಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಒತ್ತಾಯಿಸಿ ನಡೆಯುತ್ತಿರುವ ು ಹೋರಾಟಗಳಲ್ಲಿ ಸಕ್ರಿಯ ಪಾಲುದಾರನಾಗಿದ್ದೇನೆ.


ೇಶದ ಜನತೆಯ ಬದುಕು - ಬವಣೆಗಳನ್ನು ಬಲ್ಲವನಾಗಿದ್ದು, ಇಲ್ಲಿನ ನಾಗರಿಕರ ರ್ಶಗಳನ್ನು ನೀಗಿಸುವ, ಪ್ರದೇಶದ ಅಭಿವೃದ್ಧಿಗೆ ದುಡಿಯುವ ನಿರ್ಧಾರ ಮಾಡಿದ್ದೇನೆ. .ಆರ್. ಪುರಂ ನಗರಸಭೆಗೆ ನಡೆಯುತ್ತಿರುವ ಚುನಾವಣೆಗೆ ಸಿಪಿಐ(ಎಂ) ಅಭ್ಯರ್ಥಿಯಾಗಿ **. 29ರಿಂದ ಸ್ಪರ್ಧಿಸಿರುತ್ತೇನೆ.** ನನ್ನ, **ಕುಡುಗೋಲು, ಸುತ್ತಿಗೆ, ನಕ್ಷತ್ರದ** ಗುರ್ತಿಗೆ ಮೂಲಕ ವಾರ್ಡಿನ ಅಭಿವೃದ್ಧಿಯನ್ನು ಸಾಧಿಸಲು ನಗರಸಭೆಗೆ ಆಯ್ಕೆ ಮಾಡಿ ಗಿ ಕೋರಿಕೊಳ್ಳುತ್ತೇನೆ.



ಬೆಲೆ ಏರಿಕೆ ವಿರುದ್ಧ ಸಿಪಿಐ(ಎಂ) ಹೋರಾಟ



ನಾಗರಿಕ ಸೌಲಭ್ಯಗಳಿಗಾಗಿ ಜನವಾದಿ ಮಹಿಳಾ ಸಂಘಟನೆಯ ಹೋರಾಟ



ಸಿಪಿಐ(ಎಂ) ನೇತೃತ್ವದಲ್ಲಿ ಕಾರ್ಮಿಕರ ಹೋರಾಟ




ಬಿದ್ದಾವು ಮನೆಗಳು... ಬಿದ್ದಾವು ಗಂಗಳು....
ಬಿದ್ದಾವು ಮಕ್ಕಳು-ಮರಿಗಳು ಬೀದಿಗೆ ವಿಜಿನಾಪುರದ ಸ್ಲಮ್ಮು ನೋಡ್ರಣ್ಣ
(ಇವು ಬಿರುಗಾಳಿಗೆ ಬಿದ್ದದ್ದಲ್ಲ, ಕಾಂಗ್ರೆಸ್ ಆಡಳಿತದಲ್ಲಿ ಬೀಳಿಸಿದ್ದು)

ಆ ಕಮ್ಯುನಿಸ್ಟ್ ಪಾರ್ಟಿಯವರಿಗೆ ಕಾರ್ಮಿಕರು, ಬಡವರು ನೋಟೂ ಕೊಡ್ತರಂತೆ, ಓಟೂಕೊಡ್ತರಂತೆ. ನಿಷ್ಟಯಿಂದ ಕೆಲಸಾನೂ ಮಾಡ್ತಾ ಅವ್ರಂತೆ. ನಾವೇನು ಮಾಡುವುದು ದಳ-ದಳಾ..... ಅಶ್ವಥ ನಾರಾಯಣ


ಕೃಷ್ಣರಾಜಪುರ ನಗರಸಭೆ ಚುನಾವಣೆ - 10.08.2003

ಭ್ರಷ್ಟ ಆಡಳಿತ ತೊಲಗಿಸಲು ಜನರ ಹಿತ ರಕ್ಷಿಸಲು


ಗೌರಮ್ಮ (ವಾರ್ಡ್ ನಂ.1)


ಪಿ.ಜಯರಾಂ (ವಾರ್ಡ್ ನಂ.29)


ಕೆ.ಜಿ.ಜಗನ್ನಾಥ್
(ವಾರ್ಡ್ ನಂ.7)



ಎಂ. ಶಿವಕುಮಾರ್
(ವಾರ್ಡ್ ನಂ.31)

- ★ ಕುಡಿಯುವ ನೀರಿನ ವ್ಯವಸ್ಥೆಗಾಗಿ
- ★ ಸಮರ್ಪಕ ಚರಂಡಿಗಳಿಗಾಗಿ
- ★ ವಾರ್ಡಿನ ಶುಚಿತ್ವಕ್ಕಾಗಿ
- ★ ಉತ್ತಮ ರಸ್ತೆಗಳಿಗಾಗಿ ಬೀದಿ ದೀಪಗಳಿಗಾಗಿ
- ★ ಸಿಎಂಸಿಯಲ್ಲಿನ ಭ್ರಷ್ಟಾಚಾರ ನಿಯಂತ್ರಿಸುವುದಕ್ಕಾಗಿ
- ★ ಪ್ರದೇಶದ ಕೋಮುಸೌಹಾರ್ದತೆಗಾಗಿ
- ★ ಸ್ಲಂಗಳ ಅಭಿವೃದ್ಧಿಗಾಗಿ

ಸಿಪಿಐ(ಎಂ) ನಿಮ್ಮದು
ಅಭಿವೃದ್ಧಿ ವಾರ್ಡುಗಳದು


ಕೆ.ಸಿ.ಮಲ್ಲಿಕಾ
(ವಾರ್ಡ್ ನಂ.30)


ಕೆ.ಪ್ರಭಾಕರ್
(ವಾರ್ಡ್ ನಂ.11)


ಎ.ರವಿಚಂದ್ರನ್
(ವಾರ್ಡ್ ನಂ.32)

ಕುಡುಗೋಲು, ಸುತ್ತಿಗೆ ನಕ್ಷತ್ರದ ಗುರುತಿಗೆ
ನಿಮ್ಮ ಮತ ನೀಡಿ
ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಿ


ಪ್ರಕಟಣೆ : ಸಿ.ಪಿ.ಐ.(ಎಂ) ವರ್ತೂರು ಪ್ರದೇಶ ಸಮಿತಿ

PRBDECR 319-79/79 AIKYARANGA WEEKLY. Reg. No, 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH

ಕಮ್ಯುನಿಸ್ಟ್ ಅಭ್ಯರ್ಥಿಗಳ ಹಿನ್ನೆಲೆಯಾಗಿ ಉದಾಹರಣೆಗೆ ಗೌರಮ್ಮ ಮತ್ತು ಜಯರಾಂರವರನ್ನು ನೋಡಿ ಅವರ ಮನವಿಯನ್ನು ಕೇಳಿ...

ಳೆದ 15 ವರ್ಷಗಳಿಂದ ಈ ಪ್ರದೇಶದ ಕಾರ್ಮಿಕರು, ಮಹಿಳೆಯರು ಮತ್ತು ಜನಸಾಮಾನ್ಯರ ಸ್ಯೆಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡುತ್ತಿದ್ದೇನೆ.

ಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಹಕಾರ್ಯದರ್ಶಿ ಹಾಗೂ ತಾಲ್ಲೂಕಿನ ಅಧ್ಯಕ್ಷೆಯಾಗಿರುವ ನಾನು ವಿಶೇಷವಾಗಿ ಮಹಿಳೆಯರ ಹಕ್ಕುಗಳಿಗಾಗಿ ಹಲವಾರು ೂಹಿಕ ಹೋರಾಟಗಳನ್ನು ಸಂಘಟಿಸಿರುತ್ತೇನೆ.



ರದಕ್ಷಿಣೆ, ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸಲು ನೆರವಾಗಿದ್ದೇನೆ. ವಿಧವಾ ವೇತನ, ದ್ಧ್ಯ ವೇತನ, ರೇಷನ್ ಕಾರ್ಡುಗಳನ್ನು ಫಲಾನುಭವಿ ಕೊಡಿಸಿ ಕೊಟ್ಟಿದ್ದೇನೆ.

ಭಿವೃದ್ಧಿ ಕಾಮಗಾರಿಗಳ ಸಲುವಾಗಿ ಒತ್ತಾಯಿಸಿ ನಡೆದ ಾರು ಹೋರಾಟಗಳಲ್ಲಿ ಮಹಿಳೆಯರನ್ನು ಸಂಘಟಿಸಿ ೊಂಡಿದ್ದೇನೆ. ಸಾಕ್ಷರತಾ ಆಂದೋಲನದಲ್ಲಿ ಭಾಗವಹಿಸಿ ಎರಡು ವರ್ಷಗಳ ಕಾಲ ದಲಿತರು, ಹಿಂದುಳಿದವರು, ಡವರ ನಡುವೆ ಅಕ್ಷರ ಕಲಿಸುವ ಕೆಲಸ ಮಾಡಿದ್ದೇನೆ.

ವಿರಾರು ಜನ ವಾಸ ಮಾಡುವ ವಿಜಿನಾಪುರ ಸ್ಲಂ ಹಕ್ಕು ಪತ್ರ ಕೊಡಿಸಲು, ಸ್ಲಂ ಡಿಕ್ಲೇರ್ ಮಾಡಿಸಲು ಅಲ್ಲಿನ ಗಳನ್ನು ಒಗ್ಗೂಡಿಸಿಕೊಂಡು ಸತತ ನಾಲ್ಕು ವರ್ಷ ಹೋರಾಟ ನಡೆಸಿ ಯಶಸ್ವಿಯಾಗಿದ್ದೇವೆ. ರ ಹಕ್ಕುಗಳಿಗಾಗಿ ದಾಳಿ-ದಬ್ಬಾಳಿಕೆಗಳನ್ನು ಎದುರಿಸಿದ್ದೇನೆ.

ರ್ಣ ಜಯಂತಿ ಷಹರಿ ರೋಜ್ಗಾರ್ ಯೋಜನೆಯ ಅಧ್ಯಕ್ಷೆಯಾಗಿ ಸಿಎಂಸಿ ವ್ಯಾಪ್ತಿಯಲ್ಲಿ ವಾಡಿ ಕೇಂದ್ರಗಳು, ಪ್ರಾಥಮಿಕ ಶಾಲೆ, ಶೌಚಾಲಯ, ಸಮುದಾಯ ಭವನ ುದವುಗಳನ್ನು ಆರ್ಥಿಕವಾಗಿ ಹಿಂದುಳಿದ ಜನರಿಗಾಗಿ ಯೋಜನೆಯ ಮೂಲಕ ತಲುಪಿಸಿದ್ದೇನೆ. ಾರವಿಲ್ಲದೆ ಕಾಮಗಾರಿಗಳು ನಡೆಯುವಂತೆ ಎಚ್ಚರ ವಹಿಸಿದ್ದೇನೆ.

ಬೆಳಗಾದರೆ ಜನಸಾಮಾನ್ಯರ ನಡುವೆ ಅವರ ಸಮಸ್ಯೆಗಳನ್ನು ಹೋಗಲಾಡಿಸಲು ಕೆಲಸ ವುದರೊಂದಿಗೆ ಜನವಾದಿ ಮಹಿಳಾ ಸಂಘಟನೆಯ ಮೂಲಕ ದೇಶದೆಲ್ಲ ಜನತೆ ುತ್ತಿರುವ ಸಮಸ್ಯೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದ್ದೇನೆ. ಜನತೆಯ ಗಿ ದುಡಿಯಲು ನಿಶ್ಚಯಿಸಿದ್ದೇನೆ.

ಾವೇರಿ ನೀರಿನ ಯೋಜನೆಯ ಅನುಷ್ಠಾನಕ್ಕೆ ಒತ್ತಾಯಿಸಿ, ಸರ್ಕಾರಿ ಆಸ್ಪತ್ರೆಯಲ್ಲಿನ ಗಳನ್ನು ಸರಿಪಡಿಸಲು ನಡೆಯುತ್ತಿರುವ ಹೋರಾಟದಲ್ಲಿ ತೊಡಗಿಸಿಕೊಂಡಿದ್ದೇನೆ. ಪೂರ್ವ ನ ಜನಜಾಗೃತಿ ವೇದಿಕೆಯ ಮುಖ್ಯ ಸಂಘಟನಾ ಕಾರ್ಯದರ್ಶಿಯಾಗಿಯೂ ಕೆಲಸ ತ್ತಿದ್ದೇನೆ.


ರ್ವಜನಿಕರ ಮಧ್ಯೆ ನಿರಂತರ ಪ್ರಗತಿಪರ ಚಟುವಟಿಕೆಯಲ್ಲಿರುವ ನಾನು ಕೆ.ಆರ್.ಪುರ ಾ ಚುನಾವಣೆಗೆ ದುಡಿಯುವ ಜನರ ನೇತಾರ ಪಕ್ಷ ಸಿಪಿಐ(ಎಂ) ವತಿಯಿಂದ ುತ್ತೇನೆ.

ಅಮೂಲ್ಯವಾದ ಮತಗಳನ್ನು ನನಗೆ ನೀಡುವ ಮೂಲಕ ನಗರಸಭೆಯಲ್ಲಿ ಸಕ್ರಿಯವಾಗಿ ಸಲು, ಜನಸಾಮಾನ್ಯರ ಸಮಸ್ಯೆಗಳನ್ನು ಚರ್ಚಿಸಲು, ಉತ್ತಮ ತೀರ್ಮಾನಗಳನ್ನು ಲು ಅವಕಾಶ ಕಲ್ಪಿಸಿಕೊಡಬೇಕಾಗಿ ಕೋರಿಕೊಳ್ಳುತ್ತೇನೆ. ಪ್ರಾಮಾಣಿಕತೆಯಿಂದ ರ್ಕವಾಗಿ ಅಭಿವೃದ್ಧಿ ಕೆಲಸಗಳನ್ನು ಜನರಿಗೆ ತಲುಪಿಸಲು **ಕುಡುಗೋಲು ಸುತ್ತಿಗೆ ನಕ್ಷತ್ರದ** ಮತ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ರ ಬಂಧುಗಳೇ,

ಜಯರಾಂ ಆದ ನಾನು ಕಾರ್ಖಾನೆಯೊಂದರ ಕಾರ್ಮಿಕನಾಗಿದ್ದು ಕಳೆದ ಹತ್ತಾರು ಿಂದ ಈ ವಾರ್ಡಿನ ನಿವಾಸಿಯಾಗಿರುತ್ತೇನೆ.

ಿಯು ಕಾರ್ಮಿಕ ಸಂಘಟನೆಯ ವರ್ತೂರು ಪ್ರದೇಶ ಸಮಿತಿಯ ಅಧ್ಯಕ್ಷನಾಗಿರುತ್ತೇನೆ. ಶದ ಕಾರ್ಮಿಕರ ಕಾನೂನು ಬದ್ಧ ಹಕ್ಕುಗಳಿಗಾಗಿ ನಡೆದಿರುವ ಹಲವಾರು ಹೋರಾಟಗಳಲ್ಲಿ ವಹಿಸಿ ಪಾಲ್ಗೊಂಡಿದ್ದೇನೆ. ಮಾಲೀಕರು ಪೊಲೀಸರು ಎಸಗಿದ ಅಕ್ರಮ ದೌರ್ಜನ್ಯಗಳ ಾರ್ಮಿಕರ ಬೆಂಬಲವಾಗಿ ನಿಂತು ಹಗಲಿರುಳೆನ್ನದೆ ಚಳುವಳಿಗಳಲ್ಲಿ ಪಾಲ್ಗೊಂಡಿದ್ದೇನೆ.



ಲು ಸೇತುವೆಗಾಗಿ ಒತ್ತಾಯಿಸಿ ಸ್ಥಳೀಯ ನಾಗರಿಕರನ್ನು ಿಕೊಂಡು ಹತ್ತಾರು ಬಾರಿ ರಸ್ತೆ ತಡೆ, ಧರಣ, ಪ್ರತಿ ನ್ನು ಸಂಘಟಿಸಿದ್ದೇನೆ. ಸೇತುವೆ ನಿರ್ಮಾಣದ ಹಂತದಲ್ಲಿ ಾಳ್ಳಗಳಿಂದ ಕೂಡಿ ಧೂಳುಮಯವಾಗಿದ್ದ ರಸ್ತೆಗೆ ಹಾಕಿಸುವ ಸಲುವಾಗಿ ಇತರೆ ಸಂಘಟನೆಗಳನ್ನು, ನ್ನು ಎಚ್ಚರಿಸಿ ಈ ಪ್ರದೇಶವನ್ನು ಬಂದ್ ಮಾಡಿಸಿ ಹಾಕಿಸುವಲ್ಲಿ ಯಶಸ್ವಿಯಾಗಿದ್ದೇವೆ. ಸೇತುವೆ ದ ನಂತರ ಲೆವೆಲ್ ಕ್ರಾಸಿಂಗ್ ತೆರವುಗೊಳಿಸಲು ್ಯಲು ತಡೆ ಚಳುವಳಿ ನಡೆಸಲಾಗಿದೆ.

ವ್ಯಾಪ್ತಿಯಲ್ಲಿ ವಿಧಿಸಲಾಗಿದ್ದ ವಿಪರೀತ ಅಭಿವೃದ್ಧಿ ಶುಲ್ಕಗಳ ವಿರುದ್ಧ ಈ ಪ್ರದೇಶದಲ್ಲಿ ಚಾರ ನಡೆಸಿ ಜನತೆಯನ್ನು ಜಾಗರೂಕಗೊಳಿಸಿ ಹತ್ತಾರು ಹೋರಾಟಗಳನ್ನು ನಡೆಸಲಾಗಿದೆ. ಾಟದಲ್ಲಿ ನಾನು ಮುಂಚೂಣಿಯಲ್ಲಿದ್ದು ಕಾರ್ಯ ನಿರ್ವಹಿಸಿರುತ್ತೇನೆ.

. ಪುರಂ ಪ್ರದೇಶ ವ್ಯಾಪ್ತಿಯಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಒತ್ತಾಯಿಸಿ ನಡೆಯುತ್ತಿರುವ ಯ ಹೋರಾಟಗಳಲ್ಲಿ ಸಕ್ರಿಯ ಪಾಲುದಾರನಾಗಿದ್ದೇನೆ.

ದೇಶದ ಜನತೆಯ ಬದುಕು - ಬವಣೆಗಳನ್ನು ಬಲ್ಲವನಾಗಿದ್ದು, ಇಲ್ಲಿನ ನಾಗರಿಕರ ರತೆಗಳನ್ನು ನೀಗಿಸುವ, ಪ್ರದೇಶದ ಅಭಿವೃದ್ಧಿಗೆ ದುಡಿಯುವ ನಿರ್ಧಾರ ಮಾಡಿದ್ದೇನೆ.

ಕೆ.ಆರ್. ಪುರಂ ನಗರಸಭೆಗೆ ನಡೆಯುತ್ತಿರುವ ಚುನಾವಣೆಗೆ ಸಿಪಿಐ(ಎಂ) ಅಭ್ಯರ್ಥಿಯಾಗಿ ೦. 29ರಿಂದ ಸ್ಪರ್ಧಿಸಿರುತ್ತೇನೆ. ನನ್ನ, ಕುಡುಗೋಲು, ಸುತ್ತಿಗೆ, ನಕ್ಷತ್ರದ ಗುರ್ತಿಗೆ ಮೂಲಕ ವಾರ್ಡಿನ ಅಭಿವೃದ್ಧಿಯನ್ನು ಸಾಧಿಸಲು, ನಗರಸಭೆಗೆ ಆಯ್ಕೆ ಮಾಡಿ ಾಗಿ ಕೋರಿಕೊಳ್ಳುತ್ತೇನೆ.



ಬೆಲೆ ಏರಿಕೆ ವಿರುದ್ಧ ಸಿಪಿಐ(ಎಂ) ಹೋರಾಟ



ನಾಗರಿಕ ಸೌಲಭ್ಯಗಳಿಗಾಗಿ ಜನವಾದಿ ಮಹಿಳಾ ಸಂಘಟನೆಯ ಹೋರಾಟ



ಸಿಪಿಐ(ಎಂ) ನೇತೃತ್ವದಲ್ಲಿ ಕಾರ್ಮಿಕರ ಹೋರಾಟ




ಬಿದ್ದಾವು ಮನೆಗಳು... ಬಿದ್ದಾವು ಗರಿಗಳು....
ಬಿದ್ದಾವು ಮಕ್ಕಳು-ಮರಿಗಳು ಬೀದಿಗೆ ವಿಜಿನಾಪುರದ ಸ್ಲಮ್ಮು ನೋಡ್ರಣ್ಣ
(ಇವು ಬಿರುಗಾಳಿಗೆ ಬಿದ್ದದ್ದಲ್ಲ, ಕಾಂಗ್ರೆಸ್ ಆಡಳಿತದಲ್ಲಿ ಬೀಳಿಸಿದ್ದು)

ಆ ಕಮ್ಯುನಿಸ್ಟ್ ಪಾರ್ಟಿಯವರಿಗೆ ಕಾರ್ಮಿಕರು, ಬಡವರು ನೋಟೂ ಕೊಡ್ತರಂತೆ, ಓಟೂ ಕೊಡ್ತರಂತೆ. ನಿಷ್ಠೆಯಿಂದ ಕೆಲಸಾನೂ ಮಾಡ್ತಾ ಇವ್ರಂತೆ. ನಾವೇನು ಮಾಡುವುದು ದಳ-ದಳಾ..... ಅಶ್ವಥ ನಾರಾಯಣ


ಕೃಷ್ಣರಾಜಪುರ ನಗರಸಭೆ ಚುನಾವಣೆ - 10.08.2003

ಭ್ರಷ್ಟ ಆಡಳಿತ ತೊಲಗಿಸಲು ಜನರ ಹಿತ ರಕ್ಷಿಸಲು


ಗೌರಮ್ಮ (ವಾರ್ಡ್ ನಂ.1)



ಪಿ.ಜಯರಾಂ (ವಾರ್ಡ್ ನಂ.29)



ಕೆ.ಜಿ.ಜಗನ್ನಾಥ್
(ವಾರ್ಡ್ ನಂ.7)


ಎಂ. ಶಿವಕುಮಾರ್
(ವಾರ್ಡ್ ನಂ.31)

- ★ ಕುಡಿಯುವ ನೀರಿನ ವ್ಯವಸ್ಥೆಗಾಗಿ
- ★ ಸಮರ್ಪಕ ಚರಂಡಿಗಳಿಗಾಗಿ
- ★ ವಾರ್ಡಿನ ಶುಚಿತ್ವಕ್ಕಾಗಿ
- ★ ಉತ್ತಮ ರಸ್ತೆಗಳಿಗಾಗಿ ಬೀದಿ ದೀಪಗಳಿಗಾಗಿ
- ★ ಸಿಎಂಸಿಯಲ್ಲಿನ ಭ್ರಷ್ಟಾಚಾರ ನಿಯಂತ್ರಿಸುವುದಕ್ಕಾಗಿ
- ★ ಪ್ರದೇಶದ ಕೋಮುಸೌಹಾರ್ದತೆಗಾಗಿ
- ★ ಸ್ಲಂಗಳ ಅಭಿವೃದ್ಧಿಗಾಗಿ


ಕೆ.ಸಿ.ಮಲ್ಲಿಕಾ
(ವಾರ್ಡ್ ನಂ.30


ಕೆ.ಪ್ರಭಾಕರ್
(ವಾರ್ಡ್ ನಂ.11


ಎ.ರವಿಚಂದ್ರನ್
(ವಾರ್ಡ್ ನಂ.32

**ಸಿಪಿಐ(ಎಂ) ನಿಮ್ಮದು
ಅಭಿವೃದ್ಧಿ ವಾರ್ಡುಗಳದು**

ಕುಡುಗೋಲು, ಸುತ್ತಿಗೆ ನಕ್ಷತ್ರದ ಗುರುತಿಗೆ
ನಿಮ್ಮ ಮತ ನೀಡಿ
ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಿ

ಪ್ರಕಟಣೆ : ಸಿ.ಪಿ.ಐ.(ಎಂ) ವರ್ತೂರು ಪ್ರದೇಶ ಸಮಿತಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH